ಕೊರವಂಜಿ



Koravanji

ಆಗಸ್ಟ್ ೧೯೪೫

ಮಾಸ ಪತ್ರಿಕೆ

ಸಂಪಾದಕರು :
ಶ್ರೀ|| ರಾ. ಶಿ.

ಚಿತ್ರಕಾರರು :
ಶ್ರೀ ಆರ್. ಕೆ. ಲಕ್ಷ್ಮಣ್

ಬರಹಗಾರರು :

ಶ್ರೀ|| ಖಾರಾಂತ

ಶ್ರೀ|| ಪಾತಾಳಿ

ಶ್ರೀ|| ರಾಮಚಂದ್ರ

ಇತ್ಯಾದಿ

ಬಿಡಿ ಪತ್ರಿಕೆ - - ಕೇವಲ ಎರಡಾಣೆ

ತಿಳಿನಗೆಯ ಮಾಸಪತ್ರಿಕೆ

ಕೊರವಂಜಿ

"ಕೊರವಂಜಿಯು" ತಿಳಿನಗೆಯ ಸಚಿತ್ರ ಮಾಸಪತ್ರಿಕೆ. ತಿಳಿಹಾಸ್ಯದ ಲೇಖನಗಳು, ಹರಟೆಗಳು, ಅಣಕವಾಡುಗಳು, ನಗೆ ಹಾಡುಗಳು ಇವುಗಳಿಗೆ ಸರ್ವದಾ ಸುಸ್ವಾಗತವುಂಟು. ಆದರೆ ವ್ಯಕ್ತಿಯನ್ನುದ್ದೇಶಿಸಿ ಬರೆದ ಲೇಖನಗಳಿಗೆ ಎಡೆಯಿಲ್ಲ.

ಲೇಖನಗಳನ್ನು ಕಳುಹಿಸುವವರು ತಮ್ಮಲ್ಲಿ ಒಂದು ಪ್ರತಿಯನ್ನಿಟ್ಟುಕೊಂಡರೆ ಬಹಳ ಒಳಿತು. ಸುಲಭವಾಗಿ ಓದುವಂತೆ ತಿಳಿಬರಹದಲ್ಲಿ ಬರೆದರೆ, ಅಚ್ಚಾದಾಗ ತಪ್ಪುನೆಪ್ಪುಗಳು ಕಡಿಮೆಯಾಗುವುವು.

ಸಂಪಾದಕೀಯ ಪತ್ರವ್ಯವಹಾರಗಳನ್ನು ಸಂಪಾದಕರಲ್ಲೂ ವ್ಯವಸ್ಥಾಪಕರಲ್ಲಿ ಮಿಕ್ಕ ವಿಚಾರಗಳನ್ನೂ ಪ್ರಸ್ತಾಪಿಸಬೇಕು.

ಬಳೇಪೇಟೆ, ಬೆಂಗಳೂರು ಸಿಟಿ.

ವಾರ್ಷಿಕ ಚಂದಾ ಅಂಚೆ ಮೂಲಕ ರೂ. ೨—೦—೦


ಬಿಡಿ ಪ್ರತಿ ಕೇವಲ ಆಣೆ ೦—೨—೦

—o—

ಚಂದಾದಾರರು ವಿಳಾಸ ಬದಲಾವಣೆಯಾದಲ್ಲಿ, ಕೂಡಲೆ ನಮಗೆ ತಿಳಿಸಿದರೆ,
ಬಹಳ ಸಹಾಯ ಮಾಡಿದಂತಾಗುವುದು.


—o—

ವಿಷಯಾನುಕ್ರಮಣಿಕೆ



ಮುಖದ ಸೌಂದರ್ಯಕ್ಕೆ
FOR THE SKIN
'RAJA' (REGD) SNOW
for Beauty & Complexion
MANYAM & CO
MADRAS
'RAJA' (REGD) SNOW
Removes roughness and makes the skin soft and white and is delicate application for pimples
ರಾಜಾ ಸ್ನೋ
ಮಣ್ಯಂ ಅಂಡ್ ಕೋ.,
ಮದರಾಸು — — ಬೆಂಗಳೂರು

ಯಾರೋ ದ್ರವ್ಯವನ್ನು ಸುಡುತ್ತಿದ್ದಾರೆ



ನೀವೇ ಇರಬಹುದು, ಇಲ್ಲಿ ಚಿತ್ರಿಸಿರುವಂತೆ ಪ್ರಾಯಶಃ ಸುಡದೇ ಇರಬಹುದು, ಆದರೆ ಮತ್ತೊಂದು ರೀತಿಯಲ್ಲಿ ಸುಡುತ್ತಿರುವಿರಿ. ಎರಡೂ ಒಂದೇನೆ ಅನವಶ್ಯಕವಾದ ಪದಾರ್ಥಗಳನ್ನೇ ಆಗಲೀ, ಮಿತಿಮೀರಿದ ಬೆಲೆಗೇ ಆಗಲೀ ನೀವು ಕೊಂಡುಕೊಳ್ಳುವ ಪ್ರತಿಯೊಂದು ಸಲವೂ ಹಣವನ್ನು ಸುಡುತ್ತಿದ್ದೀರಿ ಏಕೆಂದರೆ ಯುದ್ಧಕಾಲದ ಖರೀದಿಗಳು ಪದಾರ್ಥಗಳ ಯೋಗ್ಯತೆ ಮೀರಿದವುಗಳೆಂದು ಎಲ್ಲರಿಗೂ ಗೊತ್ತೇ ಇದೆ

ಅನೇಕ ಪದಾರ್ಥಗಳು ವ್ಯಾಪಾರ ಮಂಡಲದಿಂದ ಅದೃಶ್ಯವಾಗಿವೆ—ಮತ್ತೆ ಕೆಲವು ಅತಿ ಸ್ವಲ್ಪವಾಗಿವೆ. ಇರತಕ್ಕ ಪದಾರ್ಥಗಳು ಎಲ್ಲರಿಗೂ ಸಮಂಜಸವಾಗಿ ವಿನಿಯೋಗವಾಗುವದಕ್ಕಾಗಿ ರೇಷನಿಂಗ್ ಮತ್ತು ಕಂಟ್ರೋಲ್ ಪದ್ಧತಿಗಳು ಅವಶ್ಯವಾಗಿರುತ್ತವೆ. ಕಂಟ್ರೋಲ್ ಮಾಡಲ್ಪಟ್ಟಿರುವ ಪದಾರ್ಥಗಳ ಬೆಲೆಗಳೂ ಕೂಡ, ಯುದ್ಧಪೂರ್ವದ ಖರೀದಿಗಳಿಗಿಂತ ಹೆಚ್ಚು ಆಗಿರುತ್ತವೆ ಹೀಗಿರುವಲ್ಲಿ ಕಂಟ್ರೋಲ್ ಮಾಡಲ್ಪಡದೇ ಇರುವ ಸಾಮಾನುಗಳ ಖರೀದಿಗಳ ವಿಚಾರ ಹೇಳಬೇಕಾದ್ದೇ ಇಲ್ಲ ನೀವು ಸತ್ತ್ರಜೆಗಳೆಂತಲೂ, ಕಪ್ಪು ಮಾರ್ಕೆಟ್ಟಿನ ಖರೀದಿಗಳನ್ನು ಕೊಡುವರಲ್ಲವೆಂತಲೂ ನಾವು ಭಾವಿಸುತ್ತೇವೆ. ಐದು ರೂಪಾಯಿಗಳಿಗಿಂತಲೂ ಹೆಚ್ಚು ಬಾಳದೇ ಇರುವ ಪದಾರ್ಥಕ್ಕೆ ಹತ್ತು ರೂಪಾಯಿಗಳನ್ನು ಏತಕ್ಕೆ ಕೊಡಬೇಕು? ಆದುದರಿಂದ, ಧಾರಣಾಪಾಸಿಯು ಮಾಮೂಲ್ ಮಟ್ಟಕ್ಕೆ ಇಳಿದು, ಕಡಿಮೆ ಖರೀದಿಗೆ ಉತ್ತಮವಾದ ಪದಾರ್ಥಗಳನ್ನು ಕೊಂಡುಕೊಳ್ಳಲು ಸಾಧ್ಯವಾಗುವವರಿವಿಗೂ, ಪದಾರ್ಥಗಳನ್ನೇ ಕೊಳ್ಳದೇ ಇರುವುದು ಬಹಳ ಉತ್ತಮ.


ನಿಮ್ಮ ವೆಚ್ಚವನ್ನು ಇಂದೇ ಕಡಿಮೆ ಮಾಡಿರಿ. ನಿಮಗೆ ಸಾಧ್ಯವಾದಷ್ಟು ಉಳಿತಾಯ ಮಾಡಿರಿ.

ಆದರೆ ನಿಮ್ಮ ಉಳಿತಾಯವನ್ನು ಸುರಕ್ಷಿತ ಮಾರ್ಗದಲ್ಲಿ ವಿನಿಯೋಗಿಸುವುದಲ್ಲದೆ, ನಿಮಗೆ ಬೇಕಾದಾಗ ಅದು ಸಿಕ್ಕುವಂತೆಯೂ ವಿನಿಯೋಗಿಸಬೇಕೆಂಬುದನ್ನು ಗಮನದಲ್ಲಿಡಿರಿ ಅಂತಹ ಮಾರ್ಗಗಳ್ಯಾವವೆಂದರೆ —

ನ್ಯಾಶನಲ್ ಸೇವಿಂಗ್ಸ್ ಸರ್ಟಿಫಿಕೇಟುಗಳು, ಗೌರ್ನ್ಮೆಂಟು ಲೋನುಗಳು, ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕ್ ಅಕೌಂಟು, ವಿಮೆ, ಪರಸ್ಪರ ಸಹಾಯಕ ಸಂಘಗಳು ಮತ್ತು ಸೇವಿಂಗ್ಸ್ ಬ್ಯಾಂಕ್ ಅಕೌಂಟ್‌ಗಳು ಇವು ಸುರಕ್ಷಿತವಾದ ಮತ್ತು ಲಾಭಕರವಾದ ಮಾರ್ಗಗಳು ಜಮೀನು, ಕಟ್ಟಡಗಳು, ವ್ಯಾಪಾರದ ಸರಕುಗಳು, ಕೈಗಾರಿಕೆಯ ಸಾಮಾನುಗಳು, ಆಭರಣಗಳು ವಗೈರೆಕೊಂಡುಕೊಳ್ಳುವುದರಲ್ಲಿ ನಿಮ್ಮ ಹಣವನ್ನು ಹಾಕಬೇಡಿರಿ ಈಗ ಅವುಗಳ ಖರೀದಿ ಬಹಳ ಹೆಚ್ಚು, ಆ ಖರೀದಿಗಳು ಬಹಳ ಮಟ್ಟಿಗೆ ಇಳಿಯುವ ಸಂದರ್ಭಗಳು ಬಹು ಹೆಚ್ಚಾಗಿವೆ.

ನಿಮ್ಮ ಭವಿಷ್ಯದುಪಯೋಗಕ್ಕಾಗಿ ಉಳಿತಾಯಮಾಡಿ ಅದನ್ನು ಸುರಕ್ಷಿತಮಾಡಿರಿ

ಗೌರ್ನ್ಮೆಂಟ್ ಆಫ್ ಇಂಡಿಯಾದ ಫಿನಾನ್ಸ್ ಡಿಪಾರ್ಟ್‌ಮೆಂಟಿನಿಂದ ಪ್ರಕಟಿಸಲ್ಪಟ್ಟಿರುತ್ತದೆ AAA 160 KN



ಸಂಪುಟ ೪] ಕೊರವಂಜಿ—ಅಗಸ್ಟ್ ೧೯೪೫ [ಸಂಚಿಕೆ ೫

ಕೈಲಾಸಂ

ಪ್ರಹಸನ ಪ್ರಪಿತಾಮಹ, ವಿಧವಾಭಿನಯ ವಿಶಾರದ, ಕಿರುಲು ಕೊರಲಾಗ್ರೇಸರ, ನಗುನಾವೀನ್ಯ ನಿಪುಣ, ಇತ್ಯಾದಿ ಇತ್ಯಾದಿ ಶ್ರೀ ಕೈಲಾಸಂ ಅವರು ಈಗ ತಾನೇ ತಮ್ಮ ಅರವತ್ತನೆಯ ತುಂಬು ಪ್ರಾಯಕ್ಕೆ ಬಿದ್ದಿದ್ದಾರೆ. ಇದಕ್ಕಾಗಿ ಅವರೇನು ಶ್ರಮಿಸದೇ ಇದ್ದುದರಿಂದಲೇ ' ಬಿದ್ದಿದ್ದಾರೆ ' ಎಂದು ಹೇಳಬಯಸುತ್ತೇವೆ.

ಮನಸ್ಸು ಕದಡಿ, ಜೀವನವು ಬೇಸರವಾಗಿ, ಕಂಡಿದ್ದೆಲ್ಲಾ ಕೆಟ್ಟದೆಂಬ ಯೋಚನೆಯು ಒಮ್ಮೊಮ್ಮೆ ಯಾರಿಗಾದರೂ ಉಂಟಾಗುವುದು. ಅಂತಹ ಸಮಯದಲ್ಲಿ ಕಂಡುದನ್ನು ಕೊಂಕು ದೃಷ್ಟಿಯಿಂದ ನೋಡಿದರೆ ಸಕಲ ಕಷ್ಟಗಳೂ ನಗೆಯಲೆಯ ಮೇಲೆ ಹರಿದು ಮನಸ್ಸು ಚುಚ್ಚುವುದು ತಪ್ಪಿಹೋಗುತ್ತವೆ. ಈ ದೃಷ್ಟಿಯೇ ಕಷ್ಟಗಳನ್ನು ಪರಿಹರಿಸುತ್ತೆಂದಲ್ಲ. ಆದರೆ ಕಷ್ಟಗಳು ಮನಸ್ಸನ್ನು ಕೆಣಕಿ ಕೊರಗಿಸುವುದು ತಪ್ಪುತ್ತೆ.

ಈ ತೆರನಾದ ಕೊಂಕು ದೃಷ್ಟಿಯನ್ನು, ವಿಡಂಬನ ವೀಕ್ಷಣೆಯನ್ನು, ಪ್ರಪಸನ ಪ್ರಯೋಗವನ್ನು- ಮುಖ್ಯ-ವಂಡರ ಕಣ್ಣ ನೋಟವನ್ನು ಸುಮಾರು ವರ್ಷಗಳ ಹಿಂದೆ ಶ್ರೀಯುತ ಕೈಲಾಸಂ ಅವರು, ಅನಿರೀಕ್ಷಿತವಾಗಿ ಆಕಸ್ಮಿಕವಾಗಿ ಸಂಪಾದಕರಿಗೆ ದೊರಕಿಸಿಕೊಟ್ಟರು.

ಅಂದ ಮೇಲೆ ಕೊರವಂಜಿಯ ಋಣವು ಕೈಲಾಸಂಗೆ ಎಷ್ಟರ ಮಟ್ಟಿಗೆ ಎಂಬುದು ಹೇಳಬೇಕಿಲ್ಲ ಇದು ಕಂಡ ಮೇಲೆ ಓದುಗರಿಗೆ ಒಂದು ಸಂಶಯ ಬರುವುದು ಖಚಿತ. ಅಂತಹ ಗುರುವಿನ ಒಲುಮೆಯಿದ್ದೂ ಕೊರವಂಜಿಯು ಇಷ್ಟೇನೆ, ಎಂದು. ಆದು "ನಮ್ಮ" ಮಾನವೀಯತೆ. ಕೈಲಾಸಂರವರ ಹೆಸರು ಹೇಳುವ ಯೋಗ್ಯತೆ ಇಲ್ಲದಿದ್ದರೂ ನಮ್ಮ ಮಟ್ಟದ ಮನದವರಿಗೆ ಸ್ವಲ್ಪವಾದರೂ ಸುಖ ಕೊಟ್ಟರೆ, ಒಮ್ಮೆಯಾದರೂ ನಗಿಸಿದರೆ, ಆಗಿಂದಾಗ್ಗೆ ಕಚುಗುಳಿ ಇಟ್ಟರೆ, ಅವೆಲ್ಲಾ ಯಾರಿಗೆ ಸಲ್ಲಬೇಕಾದುದು ಎಂಬುದು ಈಗ ಗೊತ್ತಾಯಿತಷ್ಟೆ

ಅರವತ್ತರ ಪ್ರಾಯಕ್ಕೆ ಕಾಲಿಟ್ಟ ಕೈಲಾಸಂ ಇನ್ನಾದರೂ ದಾರಿ ಕೇರಿ ಹೋಕನಾಗದೆ, ಮಾರ್ಕಂಡೇಯ, ಕೀಚಕ, ಭೀಷ್ಮನ ಕುಟೀರ, ಇತ್ಯಾದಿ ಇತ್ಯಾದಿಗಳನ್ನು ಬರೆದು ಪಾತ್ರ ಪ್ರೌಢಿಮೆಯನ್ನು ತೋರಿಸಿ, ಸಕಲರಿಗೆ ಇಲ್ಲಾ ಹಲವರಿಗಾದರೂ— ಸಕಲ ಕಾಲ ಸಂತೋಷವನ್ನಿತ್ತು ಕಿರಿಯರಿಗೆ ಮಾರ್ಗ ಸೂಚಕನಾಗಲೆಂದೂ ಆ ತನಕ ದೈವ ಶಕ್ತಿಯು ಆತನ ದೈಹಿಕ ಮತ್ತು ಮನಶ್ಶಕ್ತಿಯನ್ನು ಹರಿತವಾಗಿರಿಸಲೆಂದೂ, ಆತ್ಮೀಯವಾಗಿ ಹಾರೈಸುತ್ತೇವೆ-

---

೧

ಕಾನು ಏನು ಐತ್ವ ಲಾನು ಸ ಮತ್ತು ಓ !
ಯಾರ್ಗೆ ಇರಲಿ, ನೆತ್ತೀಲ್ಬಿತ್ತ—
ಹಾ ! ಬಿತ್ತು ಬ್ಲೋ !
ಬಂಡವಾಳಿಲ್ಲದ ಭಂಡಬಾಳು,
ಅಮ್ಮಾವ್ರ ಹಿಂದಿನಪ್ಪಾವರು,
ಪೇನೇ ಹುಡುಕೋ ಪೇರೆನ್ಟ್ಸು,
ಗಟ್ಟಿಯೇ ಇಲ್ಲದ ಗಟ್ಟಿಗರು,
ಸಾಯ್ದೇ ಬದುಕೋ ಪೇದೆಗಳು,
ಕ್ಲಬ್ಲೇ ಬೀರೋ ಕ್ಲಬ್ಬಿಗರು,
ಕಾಂಪ್ಲಿಮೆಂಟ್ರಿ ಕಂಪನಿಗಳು,
ಹೋಮೇ ಇಲ್ಲದ ಹೋಂರೂಲು
ಎಲ್ಲರ್ನೂವೆ ಗಲ್ಲಹಿಡಿದು,
ಗ್ರೀನ್‌ರೂಮಿಂದ ಫರದೆ ಈಚೆ
ತಳ್ಳಿದ ಅಂದರೆ,--ಭೂಪ....ಕಾನು ಏನು ...

೨

ಆ ಹೆಬ್ಬೆಟ್ಕೊಟ್ಹೈದ,—
ಕಣ್ಣೀರಿಡೋ ಹೆಣ್ಣು,—
ಹೊಳೇಗ್ಬಿದ್ದೆತ್ಮಗ,—
ಶ್ರಾದ್ಧ ಮಾಡೋ ರಾದ್ಧಾಂತ,—
ರಾಜಾ ವಾರ್ಟಿನ್ ಕಪ್ಪಣ್ಣ,—
ಶನಿ ಜಾತಿ, Money ಜಾತಿ,—
ನಾಯಿಾನ್ ಮುದ್ನೋ ತಾಯಿ,—
ಯಾತ್ಕೆ ಕೊಡೋ ಪೂತ್ಕೆ—
ಒಲ್ಲೆ ಅಂದ್ರೂ, ಎಲ್ಲಾನೂವೆ
ಸಿಡಿಯೋ ನಗೇಲ್ಗಂಟ್ಹಾಕಿ
ಕೊಟ್ಟ ಅಂದ್ರೆ-ಭೂಪ!... ಕಾನು ಏನು....

* * *

ಉರಿಗಾಳು

—o—

" ಬರ್ಲಿನ್ ಮರಳಿ ಬರಲಿದೆ " ಎಂಬ ಹಾಡನ್ನು ಹೇಳಿ ಮಿತ್ರರಾಷ್ಟ್ರಗಳಿಗೆ ದ್ರೋಹಮಾಡುವ ಜರ್ಮನ್ ಹುಡುಗರನ್ನಡಗಿಸಲು ' ವಂದೇ ಮಾತರಂ ' ಗಾನವನ್ನು ಅಡಗಿಸಿದ ಹಲವು ಭಾರತೀಯರನ್ನು ಅಲ್ಲಿಗೆ ಕಳುಹಿಸುವ ಯೋಜನೆ ಇದೆಯಂತೆ.

*　　*　　*

" ಬಟ್ಟೆ ಇಲ್ಲದೆ ಆತ್ಮಹತ್ಯೆ !....ಬಟ್ಟೆಕೊಡುವುದಾಗಿ ಅಧಿಕಾರಿಗಳ ಭರವಸೆ " (ಪತ್ರಿಕೆ)....ಕೊನೆಗಾಲಕ್ಕಾದರೂ ಅಷ್ಟು ಸಹಾಯ ಮಾಡಬೇಡವೇ, ಸರ್ಕಾರ !

" ಭಾವಿಯ ಕಾರ್ಯಕ್ರಮ ವೈಸ್ರಾಯರ ಮೇಲೆ ಬಿದ್ದಿದೆ ! " (ಸಿಮ್ಲಾ ಸುದ್ದಿ)....ಅವರೂ ಆಳವಾಗಿಯೇ ತೋಡಿದಾರೆ

*　　*　　*

" ಗಾಂಧಿ ಜಿನ್ನ ಇಬ್ಬರನ್ನೂ ಒಂದೇ ಕಾರಾಗೃಹದಲ್ಲಿರಿಸಿ, ಒಂದು ಒಪ್ಪಂದ ಮಾಡಿಕೊಳ್ಳುವವರೆಗೆ ಅವರನ್ನು ಹೊರಗೆ ಬಿಡಕೂಡದು " (ಶ್ಯಾಮದಾಸ್ ಗಿದ್ವಾನಿ) ....ಈಗ ಮಾಡಿರುವುದು ಹಾಗಲ್ಲವೇನು ?....ಆತನಿಗಿನ್ನೂ ಮುಂದಟ್ಟಾಗಿಲ್ಲ ಅಷ್ಟೆ....

*　　*　　*

" ಪ್ರಪಂಚದ ಕಣ್ಣೆಲ್ಲ ಇಂಡಿಯಾದ ಮೇಲೆ "........ನಮ್ಮ ಪೀಡೆ ಎಲ್ಲ ಈ ದೃಷ್ಟಿ ದೋಷದಿಂದಲೇ !

*　　*　　*

ಮಾರ್ಲಿ ಮಾಯೆ ಎಂಬರು ; ಮಾಂಟೆಗು ಕುಂಟೆಂಬರು ; ಕ್ರಿಪ್ಸ್ ಕುರುಡೆಂಬರು ; ಅಮೆರಿ ಮೋಸವೆಂಬರು ; ವೇವಲ್ಲು ಹಾಗಲ್ಲವೆಂಬರು. ಮಾಯೆಗೆ ಮೋಸ ಹೋದದ್ದೇ ಮೋಸ, ಕುಂಟೆಗೆ ಕುರುಡಾದದ್ದೇ ಕುರುಡು. ಆಹಾ ! ಕಪಟದ ಕಿಚ್ಚಿಗೆ ಕಲ್ಮಷವೇ ಗಾಳಿ ಆಯಿತಲ್ಲಾ. ಒಡಕಿಲ್ಲದ ಮಡಕೆಗೆ ಹಟವೇ ದಡಿ ಆಯಿತಲ್ಲಾ. ಭೀತನ ಮುಂದೆ ಭೂತವೇ ಬಂದು ಸಿಂತಿತಲ್ಲಾ........ಕೊರವಂಜಿಯ ಕಾಯುವಪರಂಜಿ ದೇವಾ !

ಮೂಡಲಿಗಂಜಿ ಪಡುವಲ ಹೊಕ್ಕೊಡೆ, ಮೂಲೆಯಲಿ ಕೂಡುವುದು ತಪ್ಪೀತೆ? ದಾಸಕೂಪದಲ್ಲಿದ್ದು ಗದ್ದುಗೆಯನೇರಿಸೆಂದು ಬೇಡಿದೊಡೆ ಮತ್ತೊಂದಿಷ್ಟದ್ದುವರಲ್ಲದೆ ಎದ್ದು ಬಾ ಎಂದು ಮುದ್ದಿಸುವರೆ? ನಿನ್ನೆಯು ನಾವೇ, ಇಂದಿನ ನೀವು, ಎಂದು ಬಿಗಿದಪ್ಪಿದೊಡೆ ನುಸುಳಿ ತಪ್ಪುವುದೊಪ್ಪೆ? ಬಿಡು ಶಂಕೆ ಬಿಡು ಬಿಂಕ ಎಂದೆದೆಯಂ ತಟ್ಟು,—ಕೊರವಂಜಿ ಕಾಯುವಪರಂಜಿ ದೇವಾ.

★ ★ ★

ಅಲ್ಲಿ ಆ ಕಾಟ ತಪ್ಪಿಸಲೆಂದು ಇಲ್ಲಿ ಈ ಆಟ ಹೂಡುವುದು ಸರಿಯೇ? ಕಪ್ಪೆಗಳ ತಕ್ಕಡಿಯಲಿ ಒಪ್ಪಾಗಿ ಕೂಡಿಸಿ ಹಾವೆಂದು ಹೆದರಿಸಿ ಚೆದರಿಸುವುದು ಸರಿಯೆ? ತನ್ನ ಹಸ್ತದಲಿರಿಸಿದ ವೀಟೋವನನ್ಯ ಹಸ್ತದಲ್ಲಿರಿಸುವುದು ಸರಿಯೆ? ಸರಿ, ಸರಿ, ನೀದೂರ ಸರಿ ಯೆಂದೊದರಿ ಮುಂದರಿಯದೆ ಬರಿಗೈಯ ಹಿಸುಕುವುದು ಸರಿಯೆ, ಹೇವೀರ, ಎಂದ ಕೊರವಂಜಿಯ ಕಾಯುವಪರಂಜಿ ದೇವಾ.

★ ★ ★

ಬರ್ಲಿನ್‌ನಲ್ಲಿ ತ್ರಿಮೂರ್ತಿಗಳ ಸಮ್ಮೇಳನಕ್ಕೆ ನೂರು ಕಸದ ಬುಟ್ಟಿಗಳನ್ನು ತರಿಸಿದ್ದರಂತೆ........ಹಾಗಾದರೆ, ಅಲ್ಲಿ ಇಂಡಿಯಾ ಸಮಸ್ಯೆ ಬಂದೇ ಬಂದಿರಬೇಕು!

✤ ✤ ✤

ಮೈಸೂರು ಮುಖಂಡರು ರಾಷ್ಟ್ರನಾಯಕರಿಗೆ ಪರಿಸ್ಥಿತಿಯನ್ನು ಚೆನ್ನಾಗಿ ವಿವರಿಸಿದರು!" (ಪತ್ರಿಕೆ)....ಇದಕ್ಕೆ ನಾವು ಆಶ್ಚರ್ಯ ಪಡಬೇಕೇನು?

★ ★ ★

ವಾಲೆಗೆ ವಜ್ರವೇ ಚೆನ್ನು! ವಾಲಿಗೆ ಸುಗ್ರೀವನ ಹೆಂಡತಿಯೇ ಚೆನ್ನು!

★ ★ ★

ರಾತ್ರಿ ಎಲ್ಲ "ಹಿಟ್ಲರ್ ವಧೆ" ಕಥೆ ಕೇಳಿಬಿಟ್ಟು, ಬೆಳಗಾಗೆದ್ದು ಆರ್ಜೆಂಟೀನಾದಲ್ಲಿ ಹುಡುಕಿನೋಡು, ಅಂದ.

★ ★ ★

"ಸರ್ವ ಗಾಂಧಿ ಚಮತ್ಕಾರಃ ಖದರಂ ಪ್ರತಿಗಚ್ಛತಿ"



" ಏ ! ಪಕ್ಕದಂಗ್ಡಿಗೆ ಹೋಗಿ ಸರಿಯಾದ ಗಂಟೆ ಎಷ್ಟು ಕೇಳ್ಕೊಂಬಾ "

ನನ್ನ ಸರ್ವಿಸ್

ಹೌದು, ಸ್ವಾಮಿ! ನಾನು ರಿಟೈರಾಗಿ ನಾಲ್ಕು ವರ್ಷವಾಯಿತು. ಇನ್‌ಷೂರ್ ಹಣಕ್ಕೆ ಇಲ್ಲೇ ಒಂದು ಮನೆ ತೆಗೆದೆ ... ಏನು? ನನ್ನ ಸರ್ವಿಸೇ? ಇಂಜಿನಿಯರಿಂಗ್ ಇಲಾಖೆ. ಅಸಿಸ್ಟೆಂಟ್ ಆಗಿ ರಿಟೈರಾದೆ. .ಸರಿ, ಬಿಡಿ, ನಿಮ್ಮ ಭ್ರಾಂತು ಅವೆಲ್ಲ ಹಿಂದಿನ ಕಾಲದ ಮಾತು. ಮನೆಬಾಗಿಲಿಗೇನೆ ತಂದು ಕೊಡೋರು ಕಂಟ್ರಾಕ್ಟರುಗಳು . ನಾನು ಏನಿಲ್ಲ ಅಂದರೂ ನಾಲ್ಕು ಮನೆ ಕಟ್ಟಿಕೊಳ್ಳಬಹುದಾಗಿತ್ತು.... ಆದರೂ, ಪುಕಾರ್ ಬಂದೀತು ಅಂತ ...ಅಲ್ಲಿ ಇಲ್ಲಿ ಅವರಿವರ ಹೆಸರಿನಲ್ಲಿ ಹಾಕಿದೆ ಒಂದಿಷ್ಟು ಹಣಾನ....

ಆಗಿನ್ನೂ ಕನ್ನಂಬಾಡಿ ಕಟ್ಟುವ ಸಮಯ ..ಅಲ್ಲಿಗೆ ಹಾಕಿದರು ನನ್ನನ್ನ ... ಎತ್ತಿಕೊಳ್ಳುತ್ತ. ..ಅಲ್ಲೇನಿದೆ, ಮಣ್ಣು, ಅಂತ ನಾನು ಗೋಳಾಡುತ್ತಾನೆ ಇದ್ದೆ. ಸಿಕ್ತು ಸಮಯ, ಅಂತ, ಕಡೆಗೆ ನನ್ನನ್ನ ಆ ಚಿಕ್ಕ ವಯಸಿನಲ್ಲೇ ಸೂಳೆಕೆರೆಗೆ ತಳ್ಳಿದರು. ಅನುಕೂಲವಾದ ಜಾಗ. ಆದರೆ, ನಾನು ಅಲ್ಲಿ ಭದ್ರಪಡಿಸುವುದರೊಳಗೆ ಮಾರಿಕಣಿವೆಗೆ ಹೋಗು ಅಂದರು. ಎಲ್ಲಿಂದೆಲ್ಲಿಗೆ, ಅಂತ ಗೊಣಗಿದೆ, ಬೊಡಕೊಂಡೆ; ಹಲ್ಲುಕಿರಿದೆ, ಕಾಲು ಕಟ್ಟಿಕೊಂಡೆ. ಜಗಳೂರಿಗೆ ಕಳುಹಿಸಿಬಿಡುತ್ತೇವೆ ಅಂತ ಬೆದರಿಸಿದರು. ಅಷ್ಟುಹೊತ್ತಿಗೆ ಅವರ ಕಣ್ಣಿಗೆ ಕೆಮ್ಮಣ್ಣುಗುಂಡಿ ಕಾಣಿಸಿತು. ದೇವರೇ ಗತಿ, ಅಂತ ನನ್ನ ಅಲ್ಲಿಗೆ ನೂಕಿದರು, ಸಂಸಾರ ಸಮೇತವಾಗಿ. ಇದ್ದಿದ್ದರಲ್ಲೇನೋ ಸುಖವಾಗಿತ್ತು, ಅನ್ನಿ. ಅಲ್ಲಿ ನನ್ನ ಮೂರನೆಯವಳು—ಮಲೆನಾಡಿನ ನೆನಪಿಗಾಗಿ ಅವಳಿಗೆ ರಕ್ತಾಕ್ಷಿ ಅಂತ ಹೆಸರಿಟ್ಟಿದ್ದೇನೆ . ಹುಟ್ಟಿದ್ದು. ಅವಳಾದ ಮೇಲೆ ಹುಟ್ಟಿದವನೇ ಹುಚ್ಚಾರಾಯ ಅಂದರೆ, ಶಿಕಾರಿಪುರಕ್ಕೆ ವರ್ಗವಾದ ಸಮಾಚಾರ ನಾನು ಹೇಳಬೇಕಾಗಿಯೇ ಇಲ್ಲ ಶಿಕಾರಿಪುರದಲ್ಲಿ ತಕ್ಕಮಟ್ಟಿಗೆ ತಕ್ಕಡಿ.... ಹಿ ಹಿ ತಮಗೆ ಗೊತ್ತಾಯಿತಲ್ಲಾ! ಅದಕ್ಕೋಸ್ಕರವೋ ಏನೋ, ಅಲ್ಲಿಂದ ನೆಟ್ಟಗೆ ಕೊಪ್ಪಕ್ಕೆ ಕಳುಹಿಸಿದರು ನನ್ನನ್ನ. ಅದೂ ಆಯಿತು. ಅನೀಮಿಯಾಗೂ ತಿರುಗಿತು. ಯಾರು ಯಾವದೋ ನಾಲ್ಕು ನೇರು ರಕ್ತಾನೂ ತುಂಬಿಕೊಂಡೆ ...ಕೊಂಚ ಚೇತರಿಸುತ್ತಲೂ ಎತ್ತಿ ಬಿಸಾಕಿದರು ನನ್ನನ್ನ ಹುಲಿಕಲ್ ದುರ್ಗಕ್ಕೆ. ಅಯ್ಯೋ! ಅಯ್ಯೋ! ಅಯ್ಯೋ! ಪ್ರಾಣ ಉಳಿದದ್ದೆ ಅವಳ ತಾಳಿಯಿಂದ. ಅಲ್ಲಿಂದ ವರ್ಗ ಕೇಳುವುದಕ್ಕೇ ಭಯ ಬಾಯಿ ತೆರೆದರೆ ಸರಿ, ತಿಪ್ಪೆಸಮುದ್ರಕ್ಕೆ ಹೋಗುತ್ತೀಯಾ, ಅನ್ನುವರು. ತಿಳಿದು ತಿಳಿದೂ ಅಲ್ಲಿಗೆ ಯಾವಾನಾದರೂ ಧುಮುಕುತ್ತಾನೆಯೇ? ಗ್ರಹಚಾರ ಕಡಮೆಯಾಗಿ, ಅಲ್ಲಿಗೂ ನುಗ್ಗಿದೆ....ಸಿ.ಇ. ಅವರು ಮೇಲುಕೋಟೆ! ಮೇಲಕೋಟೆ! ಅಂತ ಮೊದಲಿನಿಂದಲೂ ಮೊಟಕುತ್ತಲೆ ಇದ್ದರು. ಆರು ವರ್ಷದ

ಹಿಂದೆ ಆದನ್ನ ನಡೆಸಿಯೇ ಬಿಟ್ಟರು. ಆದದ್ದೆಲ್ಲ ಆಗಲಿ, ಅಂತ ನಾನೂ ಹಣೆ ಚಾಚಿದೆ. ಸಾಯುವುದರೊಳಗೆ ಒಂದು ಸಲ ಸಕ್ಕರೆ ಬೈಲು ಕೊಡಪ್ಪ ಅಂತ ಕೇಳಿದ್ದೆ. ಆದರೆ, ಅಷ್ಟು ಹೊತ್ತಿಗೆ ಸರಿಯಾಗಿ ಡಯಬಿಟೆಸ್ ಅಂತ ಡಾಕ್ಟರುಗಳು ಹೆದರಿಸಿಬಿಟ್ಟರು. ಇನ್ನೇನು, ಋಳ ತುಂಬಿತು. ಲಕ್ಕವಳ್ಳಿಗೆ ಹೋಗೋ ಲಕ್ಕೂ ಇಲ್ಲ; ಜೋಗಕ್ಕೆ ಹೋಗೋ ಯೋಗವೂ ಇಲ್ಲ. ಅಷ್ಟಮದಲ್ಲಿ ಕೂತಿದ್ದ ಶನಿ, ಮೇಲೆ ಕೂತಿದ್ದ ಭಾನು—ಇಬ್ಬರೂ ನೇರಿ, "ಸಾಕು, ಮನೆಗೆ ಹೋಗು," ಅಂದು ಬಿಟ್ಟರು. ಏನು ಮಾಡೋದು? ಇಷ್ಟರಲ್ಲಿ, ಪೆಚ್ಚು ಕೆಲಸಬೇರೆ ಮಾಡಿಕೊಂಡು ಬಿಟ್ಟಿದ್ದೆ! ಮೊನ್ನೆ ತಾನೆ, ಮೂರನೆಯವಳನ್ನು ತಂದಿದೇನೆ ಮನೆಗೆ! ....ಉತ್ತರ ದೇಶದ ರಾಜರು ಯಾರಿಗಾದರೂ ಚೀಫ್ ಇಂಜಿನಿಯರುಗಳು ಬೇಕೆ, ಅಂತ ವಿಚಾರಿಸಬೇಕು. ಅಲ್ಲಿಯ ಪ್ರಜೆಗಳು ನಿಶ್ಚೇತನರಾಗಿರುವ ವರೆಗೆ ನಮಗೇನು ಭಯ? ನಾಲ್ಕು ಕಾಸು ಯಾರು ಕೊಡುತ್ತಾರೋ, ಅವರೇ ಧಣಿ, ಅವರೇ ಧೊರೆ!

———

"ನಿನ್ನೆ ನಾನು ನಮ್ಮ ಸಾಹೇಬರ ಕೈನೋಡಿ ನಿಮ್ಮ ನಶೀಬು ಚೆನ್ನಾಗಿದೆ, ಸಾರ್, ಅಂತ ಹೇಳಿದೆ."

"ಹಾ!....ನಿನಗೆ ತೋರಿಸಿದರೆ ಅವರು?"

"ಇಲ್ಲ ನಾನೇ ಇಣಕಿನೋಡಿದೆ ಕ್ಲಬ್ಬಿನಲ್ಲಿ....ಇಸ್ಪೀಟಾಡುತ್ತಾ ಇದ್ದರು.... ಅವರ ಕೈಲಿ ಇದ್ದದ್ದೆಲ್ಲ ತುರುಪು!"

* * *

"ಹಳೇ ಪೇಪರಿದೆಯೇ ಸಾರ್, ಬೆಲೆಗೆ ತೆಗೆದುಕೊಳ್ಳುತೇನೆ"

"ಒಳಗೆ ಎಲ್ಲಿಟ್ಟಿದಾರೋ ಏನೋ ಅಪ್ಪ. ಅಮ್ಮಾವರಿಲ್ಲ, ನಾಳೆ ಬಾ"

"ಹಾಗಾದರೇ, ಇದೇ ಸಮಯ, ಸಾರ್! ಖಾಲಿ ಸೀಸಾಗಳನ್ನೆಲ್ಲ ಕೊಟ್ಟು ಬಿಡಿ"

* * *

"ಯಾಕೆ, ಸರಸು? ಯಾಕೆ ಅಳುತ್ತೀಯೂ? ಏನಾಯ್ತು ಮನೆಯೊಳಗೆ?"

"ನಿಮಗೇ ಅಂತ ಮಾಡಿಟ್ಟಿದ್ದ ದೋಸೇನ ನಮ್ಮ ನಾಯಿ ತಿಂದು ಬಿಡ್ತು"

"ಅಷ್ಟೇತಾನೆ! ಬಿಡು! ಬಾ! ಕೂತುಕೊ! ನಾಳೆ ಇನ್ನೊಂದು ನಾಯಿ ತರ್ತೇನೆ"

ಗಾದೆಗಳು

(ತಾಪತ್ರಯ)

ಸಪ್ಲೈ ಆಫೀಸರ್ ಹತ್ರ ಜಗಳವಾಡೋದಕ್ಕಿಂತ,
ಡಿಪೋ ಆಫಿಸರ್ ಹತ್ರ ಡೊಂಕು ಸಲಾಮೇ ಲೇಸು.

ತುಪ್ಪ ಜಾರಿ ರೊಟ್ಟಿಮೇಲೆ ಬಿತ್ತು , ರೊಟ್ಟಿ ಜಾರಿ ಹೊಟ್ಟೆಗೆ ಬಿತ್ತು

ಅದೇ ಅಕ್ಕಿ ತಿಂದೇನು ! ಡಿಪೋ ಬಾಗಿಲು ತೆಗೆಯಿರಿ !

ಹೊಟ್ಟೆಗಿಲ್ಲದ ಶ್ಯಾನುಭೋಗ ಹಳೀ ಕೂಪನ್ ಹುಡುಕಿದ

ಹೊಟ್ಟೆಗೆ ಹಿಟ್ಟಿಲ್ಲ , ಜುಟ್ಟಿಗೆ ಎಣ್ಣೆ ಇಲ್ಲ.

ಹಂಚಿದವನಿಗೆ ಹಲ್‌ಬಿದಾಯಾ !

" ಲಂಚಕೋರ ಮನುಷ್ಯಾಣಾಂ ಸ್ವಮಿತೀ ರಚನೇನ ಕಿಂ ? "

ಸುಂಕದವನ ಹತ್ರ ಸಿಲ್ಕು ತೋರಿಸಿದ ಹಾಗೆ

ನಾಯಿ ಸುಂಕದ ಕಟ್ಟೆಗೆ ಹೋದರೂ, ನೆಕ್ಕಿದಷ್ಟೇ ದಕ್ಕೋದು.

ರಾಜಕೀಯ ಗಾದೆಗಳು

ಜನ ಮರುಳೋ, ಜನಕ್ಕೆ ಬುದ್ಧಿ ಹೇಳಿದವರು ಮರುಳೋ ?

ಮೂರ್ತಿ ದೊಡ್ಡದಾದರೂ, ಕೀರ್ತಿ ಚಿಕ್ಕದು.

ಮಂತ್ರಿ ತೂರಿದರೆ, ಅದೂ ಒಂದು ಟೂರು !

" ಲೇ " ಅನ್ನೋದಕ್ಕೆ ಅವಳೇ ಇಲ್ಲ, ಮಗನ ಹೆಸರು ಮಂತ್ರೀಶ್ವರ !

ಗಂಗೇ ಚ ಯಮುನೇ ಚೈವ
ಗೋದಾವರೀ ಸರಸ್ವತೀ ।
ನರ್ಮದಾ ಸಿಂಧು ಕಾವೇರೀ
ಪಟ್ಟಾಭೀ ಕೃತ ಕಾಲುವಾ ॥

ಲೋ ! ದೊಣ್ಣೆ !

—o—

" ನ್ಯಾಯವ ಬಿಟ್ಟನ್ಯಾಯವ ಮಾಡುವ ನಾಯಿ " ಎಂದು ಹಾಡಿ ದಾಸರು ಶುನಕ ವೃಂದಕ್ಕೆ ಅನ್ಯಾಯ ಮಾಡಿದ್ದಾರೆ. " ವಿದ್ಯಾ ವಿಹೀನಃ ಪಶು " ಎಂದು ನಮ್ಮನ್ನು ಹೊಗಳಿ ಪಂಡಿತೋತ್ತಮರು ಗೋಮಾತೆಯನ್ನು ತೆಗಳಿದ್ದಾರೆ. ಹಾಗೆಯೇ, ಕೆಲಸಕ್ಕೆ ಬಾರದ ಧಾಂಡಿಗನನ್ನ " ಲೋ ! ದೊಣ್ಣೆ ! ಎಂದು ಸಂಬೋಧಿಸುತ್ತ ತಾಯ್ತಂದೆಯರೂ ನಂಟರಿಷ್ಟರೂ ಕೋಲಲೋಕವನ್ನೇ ಕೆಸರಲ್ಲಿ ಅದ್ದುತ್ತಿದ್ದಾರೆ. ಧಾಂಡಿಗ ಎಂಬ ಪದ ಕೂಡ ' ದೊಣ್ಣೆ ' ಯ ತದ್ಭವವಾದ ದಂಡದಿಂದ ಉದ್ಭವವಾದದ್ದೇ. ಧಾಂಡಿಗರನ್ನು ದಾರಿಗೆ ತರಲೋಸುಗವೇ ' ದಂಡಂ ದಶ ಗುಣಂ ಭವೇತ್ ' ಎಂಬ ಆರ್ಯೋಕ್ತಿ ಹುಟ್ಟಿಕೊಂಡದ್ದು ; " ಮೂರ್ಖಸ್ಯ ದೊಣ್ಣೆ ಔಷಧಂ " ಎಂಬ ತತ್ವ ತಲೆ ಎತ್ತಿದ್ದು... ....

" ದೊಣ್ಣೆ ! "........ಪಾತಾಳದಲ್ಲಿ ಮೊಳೆತು, ಭೂತಾಳದಲ್ಲಿ ಚಿಗುರಿ, ವಾಯು ಮಂಡಲದಲ್ಲಿ ತೂರಾಡಿ, ಗಗನಕುಂಡಲಕ್ಕೆ ತಲೆ ಎತ್ತಿ, ಸೂರ್ಯಪಿಂಡಲದ ಕಾವಿಗೆ ಮೈಕೊಟ್ಟು ಬೆಳೆದ ಯಾವುದೋ ಜೀವಂತ ವೃಕ್ಷದ ನಿರ್ಜೀವ ಅಂಗಾಂಗವೇ,— ದೊಣ್ಣೆ ! ದೊಣ್ಣೆಯನ್ನು ಹಿಡಿಯದ, ಅದನ್ನು ಬೀಸದ, ಪುಣ್ಯಕ್ಕೋ ಪುರುಷಾರ್ಥಕ್ಕೋ ಅದನ್ನು ಬೀರದ, ಜನಾಂಗವೇ ಜಗತ್ತಿನಲ್ಲಿಲ್ಲ. ನಮ್ಮ ನಮ್ಮ ವಂಶ ವೃಕ್ಷದ ಮೇಲೆ ನೇತಾಡುತಿರುವ ನಮ್ಮ ತಾತ ಮುತ್ತಾತಂದಿರು ತಾವು ನಡೆ ಕಲಿತಾಗಿನಿಂದ ವಡೆ ಗಳಿಸುವವರೆಗೂ ನಾನಾ ಬಗೆಯ ಚಟುವಟಿಕೆಗಳಿಗಾಗಿ ಕೋಲನ್ನೇ ಅಳವಡಿಸಿಕೊಂಡಿದ್ದರು. ಕುಂಟರು ಕುರುಡರು ಮುದುಕರು ಮೋಟರು ಮೇಷ್ಟರು —ಇವರೆಲ್ಲರಿಗೂ ಕೋಲಿನ ಆಶ್ರಯ ಬೇಕೇ ಬೇಕು. ಊರುಗೋಲಿದ್ದರೆ, ನಿಂತಲ್ಲೇ ಊರು , ಕೂರುಗೋಲಿದ್ದರೆ, ನೆಲದ ಮೇಲೆ ಕೂರಬೇಕಾಗಿಯೇ ಇಲ್ಲ. ಕೋಲನ್ನು ಹುಡುಗರು ಕಾಲಸಂದಲ್ಲಿಟ್ಟರೆ, ಅದು ಕುದುರೆ ; ಹಿರಿಯರು ಕೈಯಲ್ಲಿ ಹಿಡಿದರೆ, ಬೆತ್ತ , ಮೂಗಿನ ತುದಿಯಲ್ಲಿರಿಸಿದರೆ ದೊಂಬರ ಕಂಬ ; ಕೊಂಕುಳಲ್ಲಿ ಮರೆ ಮಾಚಿದರೆ, ಶರಣಾರ್ಥಿ , ಪೋಲೀಸಿನವನು ಬೀಸಿದರೆ ಲಾಟಿ ; ಹಾವಾಡಿಗ ಸುತ್ತಿದರೆ ಜಾಜೂಕಡ್ಡಿ , ಅಳತೆಗೆ ಗಜ ; ತೂಕಕ್ಕೆ ತಕ್ಕಡಿ. ಗೆಜ್ಜೆ ಕಟ್ಟಿದರೆ ಕುಣಿತ, ಕಜ್ಜಿ ಇದ್ದರೆ, ಅದರಿಂದಲೇ ಕೆರೆತ.

ಬಲಿಚಕ್ರವರ್ತಿಯನ್ನು ಬೇಡುವುದಕ್ಕೆ ಬಂದಾಗ ವಾಮನನ ಕೈಲಿ ದೊಣ್ಣೆ ಇತ್ತಂತೆ. ದೇವರು ದಂಡಪಾಣಿಯಾಗಿಯೂ, ಕೋದಂಡ ಪಾಣಿಯಾಗಿಯೂ ದರ್ಶನ ಕೊಡುತ್ತಾನೆ. ಯೋಗಾನರಸಿಂಹ ದೇವರು ಭಕ್ತರೊಬ್ಬರಿಂದ ವಾಕಿಂಗ್ ಸ್ಟಿಕ್ ಬೇಡಿ ತೆಗೆದಿರಿಸಿಕೊಂಡರೆಂದು ಒಂದು ಐತಿಹ್ಯವಿದೆ. ನಂಬಿಯಣ್ಣನ ಮದುವೆ

ಯನ್ನು ನಿಲ್ಲಿಸಲು ಬಂದ ಪರಮೇಶ್ವರನು 'ಮೆಲ್ಲ ಮೆಲ್ಲನೆಲ್ಲವಂ ನೋಡುತಂ ಮನದೊಳು ನಗುತೆ ಕೋಲನೂರುತೆ ಕೆಮ್ಮಿ ಕೆಮ್ಮುತ್ತಿ' ಆ ಕೋಲಿನಿಂದಲೇ ಜಗಲಿಯನ್ನೂ ಕೂಡ ಕೆಡಹಿದನೆಂದು ಹರಿಹರ ಕವಿ ಹೇಳುತ್ತಾನೆ. "ದಂಡೋ ದಮಯತಾಮಸ್ಮಿ" ಎಂದು ಶ್ರೀ ಕೃಷ್ಣನೂ ಹೇಳಿಕೊಳ್ಳುತ್ತಾನೆ.

ಜೈನ ಗುರುಗಳೊಬ್ಬರ ಆಶೀರ್ವಾದ ಬಲದಿಂದ ಸಳಮಹರಾಯ ಹುಲಿಯನ್ನು ಹೊಯ್ದು ಕೊಂದದ್ದರಿಂದಲ್ಲವೇ 'ದ್ವಾರಸಮುದ್ರದೊಳ್ ಸುಖಸಂಕಥಾ ವಿನೋದದಿಂ ಅವನ ವಂಶೀಯರು ಪೃಥ್ವೀರಾಜ್ಯಂಗೆಯ್ದುದು!" ಧೃತರಾಷ್ಟ್ರನಲ್ಲೂ ಒಂದು ವಾಕಿಂಗ್ ಸ್ಟಿಕ್ ಇತ್ತೆಂದು ಭಾರತದಿಂದ ಗೊತ್ತಾಗುತ್ತದೆ. ಶಬರಿಯಂತೂ ಅದರ ಆಧಾರದ ಮೇಲೆಯೇ ರಾಮನನ್ನರಸಿರಬೇಕು. "ಸಾಹಸಂ ತು ದಮೋ ದಂಡ:" ಎಂದು ಅಮರವೇ ಹೇಳುತ್ತಿದೆ. "ಲಟಕ ಮೇಲಕ" ಎಂಬ ಸಂಸ್ಕೃತ ನಾಟಕದಲ್ಲಿ ದಂಡದ ಪ್ರಯೋಗವನ್ನು ಚೆನ್ನಾಗಿ ವಿವರಿಸಿದೆ. ಮುನಿ, ಮಹರ್ಷಿ ಮುಂತಾದ ಮಹಾತ್ಮರನ್ನು ನಾವು ವಿಂಗಡಿಸುವುದೇ ಏಕದಂಡಿ, ತ್ರಿದಂಡಿ, ಎಂದೇ. ಅದಕ್ಕಾಗಿಯೇ, ಮಹಾತ್ಮ ಗಾಂಧಿಯವರು 'ದಂಡಿಗೆ' ಹೊರಟಾಗ, ಏಕದಂಡಿಯಾಗಿ ಹೊರಟದ್ದು. "ದಂಡ" ತೆತ್ತ ಮೇಲೆ ಅಸಹಾಯಕನಾಗಿ ಅಲೆದಾಡುವುದೇ ಗತಿ!

ತೀರ್ಥಯಾತ್ರೆಗೆ 'ದಂಡ' ಬೇಕೆಂದ ಮೇಲೆ, 'ದಂಡಯಾತ್ರೆ'ಗೆ ಬೇಡವೇ? ಡೊಂಕಣಿ ಕುಂತ ಕೈಗುದಿಗೆ ಒಳಗುದಿಗೆ ಬಿಂಡಿವಾಲ ಮುದ್ಗರ ಮುಸಲ ಕವಣೆಗೋಲು ಕುಡುಗೋಲು ಕಡಿಗೋಲು ದಡಿ ಬಲ್‌ದೊಲೆ ಸಾರ್ಚುಂದೊಲೆ ತೂಗುದೊಲೆ ತಿರುಗಣಿ ತೋಮರ—ಇವೆಲ್ಲಕ್ಕೂ ಕೋಲೇ ಮೂಲ. "ಕೋಲು ಕೋಲನ್ನ ಕೋಲೆ, ...ಕೋಲಯ್ಯ ರಾಜಾ!" ಎಂಬ ಪದ ಹೇಳುತ್ತ ಆ ಕೋಲಾಳುಗಳು ದಂಡೋಪದಂಡವಾಗಿ ಮುನ್ನುಗ್ಗುತ್ತಿದ್ದರು. ಆದ್ದರಿಂದಲೇ ದ್ರೋಣಾಚಾರ್ಯರನ್ನು ಗದುಗಿನ ನಾರಣಪ್ಪ 'ಕೋಲಗುರು' ಎಂದು ಕರೆಯುವುದು ಎಷ್ಟು ಬಿಲ್ಲುಗಳಿದ್ದರೇನು? ಜನ ಬೆದರಬೇಕಾದರೆ, ಕೋಲಿರಬೇಕು! ಹಾಗೆಯೇ, ನಮ್ಮಲ್ಲಿ ಒಂದು ರೂಲು ಹಾಕಬೇಕಾದರೆ, ಒಂದು ದೊಣ್ಣೆ ಇದ್ದೆ ಇರಬೇಕು! ಸಿಂಹ ಶಾರ್ದೂಲಗಳ ಮಾತು ಹಾಗಿರಲಿ, ಹುಲಿಯ ಜಾತಿಯ ಬೆಕ್ಕಿಗೆ ಕೂಡ, ಕೋಲೇ ದಿವ್ಯಾಸ್ತ್ರ. ಇದನ್ನು ಪಂಪನೇ ಮನಗಂಡಿದಾನೆ. 'ಪಾಲಂ ಕುಡಿಯುತಂ ದಡಿಯಂ ಕಾಣದ ಬೆಕ್ಕಿಗೆ ಪಂಪ ಸಂಪತ್ತಿ ಇತ್ತಿದಾನೆ. ಯಾರೋ ಒಬ್ಬರು ಜಗದ್ಗುರುಗಳೂ ಕೂಡ "ಕೃಷ್ಣ ಮಾರ್ಜಾಲಂ ಕ್ಷೀರಂ ಪಚ-ಪಚಃ! ಕೋಲಂತರ್ತಾರೋ! ರಂಗಃ" ಎಂದು ಕೇವಲ ಅಸಂಸ್ಕೃತರಂತೆ ಆರ್ಭಟಿಸಿದಾರೆ! ಕವಿಗಳಿಗೂ ಕೋಲೆ ಆಧಾರ ಎಂಬುದಕ್ಕೆ ಸರ್ವಜ್ಞನೇ ಸಾಕ್ಷ. ಚನ್ನಪಟ್ಟಣದ ಪತನವನ್ನು ವಿವರಿಸುವಾಗ ಆತ, "ಚಿಣ್ಣಿಯಂ ಕೋಲು ಚಿಮ್ಮಿದಂತಾ ಪಟ್ಟ ನುಣ್ಣಗಾಗಿಹುದು" ಎಂದು ಚಿತ್ರಿಸಿ ಕಣ್ಣೀರು ಸುರಿಸಿರುವನು.

ಅಧಿಕಾರವನ್ನು ಸೂಚಿಸಲು ದೊಣ್ಣೆಯಂತಹ ಸಾಧನ ಬೇರೊಂದಿಲ್ಲ. ಕಾನ್ ಸ್ಟೇಬಿಲ್ ಬೆಟ್ಟಲ್ಲಿ ತೂಗಾಡುವ ಮೊಳ ದೊಣ್ಣೆಯಿಂದ ಹಿಡಿದು, ಬೆಳ್ಳಿ ಕಟ್ಟಿಗೆ ಚಿನ್ನದ ಕಟ್ಟಿಗೆ ಮುಂತಾದ ಹೊಳ ದೊಣ್ಣೆವರೆಗೂ ದೊಣ್ಣೆಗಳ ಆಕಾರ ಅಲಂಕಾರ ಗಳಲ್ಲಿ ಅಂತಸ್ತಿಗೆ ತಕ್ಕ ವ್ಯತ್ಯಾಸಗಳಿವೆ. ಡೆಪ್ಯುಟಿ ಕಮಿಷನರೊಬ್ಬರು ತಾವು ಕ್ಲಬ್ಬಿಗೆ ಹೋದಮೇಲೂ ತಮ್ಮ ಆಫೀಸ್ ರೂಂನಲ್ಲಿ ತಮ್ಮ ದೊಣ್ಣೆ ಇರುವವರೆಗೂ ಗುಮಾಸ್ತೆಯರು ಕುರ್ಚಿಗಂಟಿಕೊಂಡು ಗೀಚುತ್ತಿರಬೇಕೆಂದು ಹುಕುಮು ಹೊರಡಿಸಿ ದ್ದರಂತೆ. ಅಂದರೆ, “ ಅವರೋ ದೊಣ್ಣೆ ! ದೊಣ್ಣೆಯೋ ಅವರು ! ” ಎಂಬುದೇ ಗುಮಾಸ್ತರ ಗುಸುಗುಸು.

“ ಕೋಲುಳಿಸುವುದಕ್ಕೆ ಹೋಗಿ ಮಗ ಪೋಲುಬಿದ್ದ ” ಎಂಬುದೇ ಪುರಾತನ ಬೆಂಟೆಂಗಳ ಬ್ರಹ್ಮಸೂತ್ರದ ಮೊದಲ ಪಂಕ್ತಿ. “ ಮಣ್ಣಿನಿಂ ಹಿರಿದಿಲ್ಲ, ದೊಣ್ಣೆಯಿಂ ಗುರುವಿಲ್ಲ” ಎಂಬುದೂ ಶಿಕ್ಷಣಶಾಸ್ತ್ರ ತತ್ವವೇ. ದೊಣ್ಣೆಯಿಂದಾಗದೆ ಇದ್ದರೆ ಬಾಯಿಗೆ ಮಣ್ಣು ತುರುಕು, ಎಂಬುದು ಅದರ ಅರ್ಥ. ಉಪಾಧ್ಯಾಯರು ದೊಣ್ಣೆವರಿಸೆಯಲ್ಲಿ ತರಬೇತಾಗಿರಬೇಕೆಂಬ ಕೂಗಿಗೂ ಇದೇ ಗುಟ್ಟು. ಆದರೆ, ಶತ ಶತಮಾನಗಳಿಂದ ಚಚ್ಚುತ್ತಾ ಬಂದಿದ್ದರೂ ಕೂಡ, ಹುಡುಗರ ಹಾವ ಭಾವ ಸಾಯಲಿಲ್ಲ, ಮೇಷ್ಟರ ಕೋಲು ಮುರಿಯಲಿಲ್ಲ ! ಬಹು ಹಿಂದಿನಿಂದಲೂ ಭಾರತೀಯ ಷೋಡಶೋಪಚಾರ ಗಳಲ್ಲಿ ದೊಣ್ಣೆ ಸೇವೆಯೂ ಒಂದು. ದ್ವಾದಶದಾನಗಳಲ್ಲಿ ದೊಣ್ಣೆದಾನವೂ ಒಂದು. ಪ್ರಾಚೀನ ಸಿವಿಲ್ ಪ್ರೊಸೀಜರ್ ಕೋಡಿಗೆ ‘ ಭಂಡನೀತಿ ’ ಎಂಬ ಹೆಸರಿರುವಂತೆ ಪ್ರಾಚೀನ ಕ್ರಿಮಿನಲ್ ಪ್ರೊಸೀಜರ್ ಕೋಡಿಗೆ “ ದಂಡನೀತಿ ” ಎಂಬುದೇ ಹೆಸರು. ದಂಡ’ಕ್ಕೆ ಇಷ್ಟು ಪ್ರಾಧಾನ್ಯತೆ ಇರುವುದರಿಂದಲೇ ನಾವು ‘ದಂಡ ಪ್ರಣಾಮು’ವನ್ನೇ ಅತಿ ವಿನಯದ ಲಕ್ಷಣ ಎಂದು ನಿಶ್ಚಯಿಸಿಕೊಂಡಿರುವುದು.

“ ಏನು, ಸ್ವಾಮಿ ! ತಮ್ಮ ಕುಟುಂಬ........”

“ ನನ್ನ ಡ್ರೈವರ್ ಸಂಗಡ ಪರಾರಿಯಾದದ್ದೇ ? ”

“ ಹೂಂ....ಅನ್ಯಾಯ ಪಾಪ....”

“ ಹೌದು. ಇನ್ನು ಅಂಥ ಡ್ರೈವರ್ ಸಿಗೋದು ಬಲುಕಷ್ಟ....’ ’

* * *

ಮೇಷ್ಟ್ರು : ಚರ್ಚಿಲ್ ಎಂಬುವನು ಇಂಗ್ಲಂಡಿನ ದೇಶ ಭಕ್ತರಲ್ಲಿ ಅಗ್ರೇ ಸರನು

ಹುಡುಗ : ಹಾಗಾದರೆ, ಅವನನ್ನು ಯಾವ ಕಾರಾಗೃಹಕ್ಕೆ ಹಾಕಿದ್ದಾರೆ, ಸಾರ್ !

ಅನರ್ಥಕೋಶ

ಶವ : ರೇಷನ್ ಗದ್ದಲದಿಂದ ಮುಕ್ತನಾದ ಪುಣ್ಯಾತ್ಮ

ಶಕುನ : ಇನ್ನೇನೂ ಆಗದೆ ಹೋದರೆ, ಏನೋ ಒಂದು ಆಗುತ್ತೆ, ಎಂಬ ಸೂಚನೆ

ಶಾಂತಿ : ಎರಡು ಯುದ್ಧಗಳ ನಡುವಣ ಸುಸ್ತು

ಸಭೆ : ಒಬ್ಬರ ಬುರುಡೆ ಕೇಳಲು ಬಂದಿರುವ ಬುರುಡೆಗಳ ಸಾಲು

ಸಭ್ಯತೆ : ಮಿರುಮಿರುಗುವ ಮೋಸ ಜೀವನ

ಸಮರ್ಥ : ಹಿಂದುಳಿದವ

ಸಮಾಧಾನ : ನಮಗಿಂತ ದೊಡ್ಡವರು ನಮಗಿಂತ ಕೀಳಾಗಿದಾರೆ ಎಂಬ ಅರಿವು

ಸಲಾಮು : ಪೋಲೀಸಿನವರೊಬ್ಬರೇ ಇದನ್ನು ಸರಿಯಾಗಿ ಮಾಡುವವರು.
ಅವರಲ್ಲೂ ಈಚೆಗೆ ಡೊಂಕು ಸಲಾಮು ಹೆಚ್ಚುತ್ತಿದೆ.

ಸವಾರಿ : ಸರ್ಕಾರಿ ಅಧಿಕಾರಿಗಳು ಆಗಾಗ ಕತ್ತು ಬಗ್ಗಿಸುವುದು ಇದಕ್ಕಾಗಿಯೇ

ಸಶೇಷ : ಕಥೆ ಮುಗಿಸುವುದು ಹೇಗೆ ಅಂತ ಗೊತ್ತಾಗದಿದ್ದರೆ, ಲೇಖಕರು
ಈ ಮಾತನ್ನು ಹೇಳಿ ಮುಕ್ತಾಯ ಕೊಡುತ್ತಾರೆ

ಸಹದೇವ : ಸಹದೇವಿ ಎಂಬುದರ ಅರ್ಥ ನೋಡಿ

ಸಹದೇವಿ : ಸವತಿ

ಸಾಪಾಡ್ರಾಮ : ರೇಷನ್ ಪದ್ಧತಿ ಬಂದಮೇಲೆ, ಈ ಡ್ರಾಮ ಆಡುವವರು
ಅಪರೂಪ

ಸಾಲ : ಬಂಜೆತನಕ್ಕೆ ದಿವ್ಯೌಷಧಿ. ಕೊಟ್ಟು, ವಸೂಲು ಮಾಡದಿದ್ದರೆ,
ಮುಂದಿನ ಜನ್ಮದಲ್ಲಿ ಮಕ್ಕಳು ಸಿದ್ಧ.

ಸಾಹಿತ್ಯ : ನಮ್ಮ ತಾತಂದಿರ ಗೋಳುಕರೆ.

ಸೀನು : ಇದಕ್ಕೆ ಯಾವಾಗಲೂ 'ಒನ್ಸ್‌ಮೋರ್' ಇದ್ದೇ ಇದೆ.

ಸೀಮೋಲ್ಲಂಘನ : ಗಡೀಪಾರು

—ಶಾಂತ.

—೩—



“ ಸ್ವಯಂ ಕೃತ ’

ನವೀನ ರಾಮ ಮಂದಿರ

——o——

ಈಚೆಗೆ ಪ್ರತಿಯೊಬ್ಬರಿಗೂ ಒಂದು ಹೊಸ ಚಟ ಹತ್ತಿದೆ. . ....ಸಾಯುವುದರೊಳಗೆ ಒಂದು ಸಂಸ್ಥೆ ಸ್ಥಾಪಿಸಿಬಿಡಬೇಕೆಂದು! ಹರಿಕಥೆಮಾಡುವ ಆಸಾಮಿಗೆ "ಹರಿಕಥಾಮಂಟಪ' ಕಟ್ಟಬೇಕೆಂಬ ಆಸೆ, ಲಾವಣಿ ಹಾಡುವ ಮನುಷ್ಯನಿಗೆ "ಲಾವಣಿಲಾಯ' ಕಟ್ಟಬೇಕೆಂಬ ಆಸೆ, "ಪ್ರಗತಿ ಪ್ರಾಕಾರ''ವನ್ನೇ ಕಟ್ಟಬೇಕೆಂದು ಮತ್ತೆ ಹಲವರ ಆಸೆ. ಹಾಗೆಯೇ ನಮ್ಮೂರು ರಾಮನರಿಗೆ "ನವೀನ ರಾಮಮಂದಿರ'' ಕಟ್ಟಬೇಕೆಂಬ ಹಟ. ಆತ ಚಿತ್ರಗಾರ ರಾಮದೇವರ ತೈಲಚಿತ್ರವನ್ನು ಬರದಿದ್ದ. ಆದರೆ ಅದನ್ನು ಯಾರೂ ಗೌರವಿಸರು, ಯಾರೂ ಗುರುತಿಸರು! ಅದೇ ಅವರ ನವೀನತೆ. ಅದನ್ನು ಇರಿಸಿ ಪೂಜೆಮಾಡುವ ಮಂದಿರವೇ ನವೀನ ರಾಮಮಂದಿರ.

ನಮ್ಮೂರಿನ ಹಳೇ ರಾಮಮಂದಿರವನ್ನು ಕೆಡವಿ ಅದೇ ಜಾಗದಲ್ಲಿ ಅದೇ ಇಟ್ಟಿಗೆಗಳಿಂದಲೇ ಹೊಸ ಮಂದಿರವನ್ನು ಎಬ್ಬಿಸಿಬಿಡಬೇಕೆಂದೇ ರಾಮಪ್ಪನ ಸಂಕಲ್ಪ. ಅನಂತರ ಅದು ಸಾಧ್ಯವಾಗಲಾರದೆಂದು ತೋರಿದಾಗ, ಹಿಂದಿನ ಗೋಡೆಯನ್ನಾದರೂ ಹಿಂದಿನ ನೆನಪಿಗಾಗಿ ಹಳೇ ಇಟ್ಟಿಗೆಗಳಿಂದೇ ಕಟ್ಟುವುದೆಂದು ನಿರ್ಧರವಾಯಿತು. ಅದೂ ಸರಿಹೋಗಲಿಲ್ಲ. ಪುನೀತವಾದ ಆ ಇಟ್ಟಿಗೆಗಳನ್ನು ಅರಳಿಕಟ್ಟೆಮೇಲೆ ಜೋಡಿಸಿದರು. ಭಕ್ತಿಪೂರ್ವಕವಾಗಿ ಅದನ್ನು ಹರಾಜುಹಾಕಿದರು. ಮೇಸ್ತ್ರಿ ಹನುಮಂತಪ್ಪನವರು ಅವುಗಳನ್ನು ಶಿರಸಾವಹಿಸಿದರು.

ನವೀನಮಂದಿರದ ನಿರ್ಮಾಣವನ್ನು ನಮ್ಮೂರಲ್ಲಿ ಯಾರೂ ಮರೆಯುವಹಾಗಿಲ್ಲ. ರಾಮಪ್ಪನಂತೂ ಅಲ್ಲೇ ಮಗ್ನ! ತಲೆಗೊಂದು ಲಪ್ಪಟ್ಟೆ ಸುತ್ತಿಕೊಂಡು ಆತನೆ ಕೂಲಿಯವರ ನಡುವೆ ಕೂತು ಕಾಮಗಾರಿ ನಡೆಸಿದ ಅವರಿಗೆ ಹುಮ್ಮಸ್ಸು ಕೊಟ್ಟ. ರಾಮದೇವರ ಮೇಲೆ ಅವರಿಗೆ ಭಕ್ತಿ ಹೆಚ್ಚುವಂತೆ ಕಥೆಗಳನ್ನು ಹೇಳಿದ. ಕಡೆಗೆ ಕಂಟ್ರಾಕ್ಟರು ಬಂದು ಆತನ ಬಾಯಿಬಿಗಿದು ಕೂಲಿಯವರನ್ನುಳಿಸಿದ. ಗಾರೆ ಅರೆಯುತ್ತಿದ್ದ ಎತ್ತುಗಳ ಬಾಲಗಳನ್ನು ಆತ ತಿರುಚಿ ಕಿವುಚಿದ, ದವಡೆಗೆ ಒದೆಬಿದ್ದಾಗ ಅಲ್ಲಿ ಹೋಗುವುದನ್ನೇ ನಿಲ್ಲಿಸಿದ. ಇಟ್ಟಿಗೆ ಜೋಡಿಸುವವರ ಜೊತೆ ಕಾಲಾವಧಿ ಮೇಲೆ ನಿಂತು ತಾನೂ ಸಾಲಾಗಿರಿಸಲು ತೊಡಗಿದ. ಅಲ್ಲಿಂದ ಅವರು ಅವನನ್ನು ಒಂದು ದಿನ ಅಕಸ್ಮಾತ್ ನೂಕಿದ ಮೇಲೆ ಮತ್ತೆ ಹತ್ತಲಿಲ್ಲ ಬಾಗಿಲು ಕಿಟಕಿ ಮಾಡುತ್ತಿದ್ದ ಬಡಗಿಗಳ ಮಧ್ಯೆ ಬಡಾಯಿಕೊಚ್ಚಿದ. ಬೆರಳೊಂದು ಕೊಚ್ಚಿಹೋದನಂತರ ಆ ಕಡೆ ಆತ ಹೋಗಲೇ ಇಲ್ಲ. ರಾಮಪ್ಪನ ಚಟುವಟಿಕೆ ಎಷ್ಟರಮಟ್ಟಿಗಿತ್ತು ಅಂದರೆ ಕಟ್ಟಡ ಮುಗಿಯುವುದೇ ಕಷ್ಟವಾಗಿಬಿಟ್ಟಿತ್ತು. ಆದರೆ, ಕಂಟ್ರಾಕ್ಟರ್, ಪಾಪ, ತಿರುಪತಿಗೆ

ಹೋಗಿಬಿಟ್ಟು ಬನ್ನಿ ಅಂತ ರಾಮಪ್ಪನನ್ನು ಬ್ರಹ್ಮೋತ್ಸವಕ್ಕೆ ಕಳುಹಿಸಿದ್ದರಿಂದ, ಸದ್ಯ:, ನವೀನ ರಾಮಮಂದಿರ ಸಿದ್ಧವಾಯಿತು.

ರಾಮದೇವರ ಚಿತ್ರವನ್ನು ಹೊಸಭವನದಲ್ಲಿರಿಸಿ ಮಂಗಳಾರತಿ ಎತ್ತಿದ—ರಾಮಪ್ಪ. ಆದರೆ, ಅಲ್ಲಿಗೆ ತೀರಲಿಲ್ಲ, ಆತನ ಚಪಲ. " ರಾಮಾಯಣೋಪನ್ಯಾಸ " ಗಳನ್ನು ವಾರವಾರವೂ ಕೊಟ್ಟು ನಮ್ಮೂರವರಿಗೆ ರಾಮರಸ ಕುಡಿಸಿಬಿಡಬೇಕೆಂದು ಅವನಿಗೆ ಭಾನವಾಯಿತು. ಪ್ರಾರಂಭಭಾಷಣ ಕೊಟ್ಟ. "ಆಧುನಿಕ ಕಾಲದಲ್ಲಿ ನಾವು ರಾಮಚರಿತ್ರವನ್ನು ಕೂಲಂಕುಷವಾಗಿ ಪರಿಗುಣಿಸಬೇಕು" ಎಂದು ಮುಂತಾಗಿ ವಿವರಿಸಿದ್ದ. ಸೋಮವಾರ, ಬುಧವಾರ, ಶನಿವಾರ ! ಸಂಜೆ ಆಯಿತು, ಅಂದರೆ; ಸೋನೆ, ಶನಿವಾರ ಕಡಲೆಹಿಟ್ಟು ಬೇರೆ. ಉಳಿದ ಎರಡು ವಾರಗಳಲ್ಲೂ ಯಾರನ್ನೋ ಹಿಡಿದು ಪ್ರಸಾದವಿನಿಯೋಗದ ವ್ಯವಸ್ಥೆ ಮಾಡಿದ.

ಶರಭಂಗ ಮಹರ್ಷಿಗಳ ಆಶ್ರಮದ ಹತ್ತಿರ ಬರುತ್ತಲೂ ಕಟ್ಟಡದ ಸಾಲ ತೀರಿಸಬೇಕೆಂಬ ತಗಾದೆಗಳು ಒಂದರಹಿಂದೊಂದು ಬರುವುದಕ್ಕೆ ಮೊದಲಾದುವು. ಪ್ರತಿದಿನವೂ ಉಪನ್ಯಾಸ ಮುಗಿದ ಮೇಲೆ ಮಂದಿರದ ನಿಧಿಗಾಗಿ ಒಂದು ಬೆಳ್ಳಿತಟ್ಟೆಯನ್ನು ಓಡಾಡಿಸಿದ. ತಾನೇ ಅದರಲ್ಲಿ ಮೂರು ರೂಪಾಯನ್ನು ಇರಿಸಿ ಸುತ್ತಿಸಿದರೂ, ಒಂದು ದಿನವೂ ಕೂಡ ಆರಾಣೆಗಿಂತ ಹೆಚ್ಚಿನ ಚಂದ ವಸೂಲಾಗಲಿಲ್ಲ ಸಾಲದ ಸಮಾಚಾರ ಹೇಗೋ ಹಾರ್ಮೋನಿಯಂ ಶೀನಪ್ಪನಿಗೆ ತಿಳಿದು ಹೋಯಿತು ಆತನ ಹಿಂದೆ ಕಾಳನೂ ಪರಾರಿ, ಗುಡಿಸುವ ಕೆಲಸವೂ ರಾಮಪ್ಪನ ಕೈಗೆ ಬಂತು.

ಉಪನ್ಯಾಸಕ್ಕೆ ಬರುವ ದೊಡ್ಡ ಮನುಷ್ಯರ ಸಂಖ್ಯೆ ಕಡಿಮೆ ಆಯಿತು ತಮ್ಮ ತಮ್ಮ ಮನೆ ಜಗಲಿಗಳ ಮೇಲೆಯೇ ಮಂಡಿಸಿ ಅವರು ರಾಮನನ್ನೂ ರಾಮಪ್ಪನನ್ನೂ ಟೀಕಿಸಿದರು " ಇಷ್ಟುಭಾರಿಕಟ್ಟಡವನ್ನು ಕಟ್ಟೆಂದು ಯೂರು ಹೇಳಿದರು ಈತನಿಗೆ?" "ಅನುಭವಿಸಲಿ" "ಹಾಸಿಗೆಯಿದ್ದಷ್ಟು ಕಾಲು ಚಾಚುವುದುಬಿಟ್ಟು ನೆಲದಮೇಲೆಯೇ ಚಾಚಿದನಲ್ಲಾ ಮಹರಾಯ ?" ಎಂದು ಹೇಳಿದರು. ರಾಮನ ಚಿತ್ರ ಬರೆಯುತ್ತಿದ್ದಾಗ, 'ಎಣ್ಣೆ ಬಿದ್ದಾಗ ಕಣ್ಣು ಮುಚ್ಚಿರಬೇಕು' ಎಂದು ಶಂಕಿಸಿದರು.

ಶಬರಿ ಬರುವುದರೊಳಗೆ ರಾಮಪ್ಪನ ಉತ್ಸಾಹವೂ ಬತ್ತಿತು. ಕಡಲೆ ಹಿಟ್ಟಿಗಾಗಿ ಕಾದು ತೂಕಡಿಸುತ್ತಿದ್ದ ನಾಲ್ಕೈದು ಹೈಕಳಲ್ಲದೆ ರಾಮಚರಿತ ರಸಾಯನಕ್ಕಾಗಿ ಕಾತುರರು ಯಾರೂ ಇರಲಿಲ್ಲ. ಸಮನ್‌ಗಳಂತೂ ಬಲವಾಗ ತೊಡಗಿದುವು. ಆ ಕಂಟ್ರಾಕ್ಟರಿಗೆ ರಾಮಭಕ್ತಿ ಕೊಂಚವೂ ಇರಲಿಲ್ಲ ಆತನಿಗೆ ಬೇಕಾಗಿದ್ದದ್ದು ಹಣ, ಹಣ, ಹಣ. ಒಳ್ಳೇ ಧನ ಪಿಶಾಚಿ ಗಂಟು ಬಿದ್ದನಲ್ಲಾ, ಅಂತ ರಾಮಪ್ಪ ಗೊಣಗಿದ.

" ಮಹಾಜನಗಳಲ್ಲಿ ವಿನಂತಿ " ಎಂಬ ಒಂದು ಚೀಟಿಯನ್ನು ಅಚ್ಚು ಹಾಕಿಸಿ, ರಾಮಪ್ಪ ಊರಿನವರಿಗೆಲ್ಲ ಹಂಚಿ, ಅವರ ಕಾಲು ಕಟ್ಟಿಕೊಂಡ. ಕಂಟ್ರಾಕ್ಟರಲ್ಲಿಗೆ ಮಾನ್ಯಮಹನೀಯರ ನಿಯೋಗಗೋಷ್ಠಿಯೊಂದನ್ನು ರವಾನಿಸಿದ. ಅದುವರೆಗಿನ ಬಡ್ಡಿ 834 ರೂ. ಬಿಡುವುದಾಗಿಯೂ, ಮೂಲ ಸಾಲವಾದ 6,588 ರೂ. ಗಳನ್ನು ಕೊಟ್ಟೇ ಕೊಡಬೇಕೆಂದೂ, ಖಡಾ ಖಡಿಯಾಗಿ ಆತ ಹೇಳಿಬಿಟ್ಟರು. ಅಮೀಲ್ದಾರರ ಬಾಯಿಂದ "ಅಷ್ಟು, ನಾಸ್ತಿ; ತೀರ ಜಾಸ್ತಿ " ಅಂತ ರಾಮಪ್ಪ ಹೇಳಿಸಿದ. ಪಾಪ! ಕಂಟ್ರಾಕ್ಟರು " ಸರಿ, ಸ್ವಾಮಿ! ತಮ್ಮಿಂದ ನನಗೆ ಅನೇಕ ಅನುಕೂಲಗಳು ದೊರೆಯಬೇಕಾಗಿದೆ 6,000 ಕೊಡಿಸಿಬಿಡಿ " ಎಂದು ಕೈ ಮುಗಿದ.

ಆರಾಣೆ ಪ್ರಕಾರ 6-0-0 ವಸೂಲಾಗಲು ದೇವರ ಅವತಾರಗಳು ಎಷ್ಟು ಬರಬೇಕು? ಏನುಕಥೆ? ...ಮೊನ್ನೆ ನಮ್ಮೂರು ಮಹಾಜನಗಳ ಮಹಾಸಭೆಯೊಂದರಲ್ಲಿ ಕಡೆಗೆ ಎಲ್ಲವೂ ಇತ್ಯರ್ಥಮಾಡಿದರು. ಯುಗಾದಿ ವರಮಾನ, ವರ್ಷಕ್ಕೆ 100 ರೂ; ತೈಲಚಿತ್ರ ಒಳಗಿಟ್ಟಿರಲು ರಾಮಪ್ಪನವರಿಂದ ಬಾಡಿಗೆ ವರ್ಷಕ್ಕೆ 60 ರೂ, ಮುಂದಿನ ಹಾಲ್‌ನಲ್ಲಿ ಗ್ರೇನ್ ಡಿಪೊ ಬಾಡಿಗೆ ವರ್ಷಕ್ಕೆ 40 ರೂ-ಇಷ್ಟನ್ನು ಸಾಲಕ್ಕಾಗಿ 30 ವರ್ಷಕೊಡುತ್ತಾ ಬರುವುದೆಂದೂ ರಾಮಪ್ಪನ ಉಪನ್ಯಾಸಗಳನ್ನು ಕೂಡಲೇ ನಿಲ್ಲಿಸಿ ನಾಲ್ಕು ಜನ ದೇವರಸೇವೆಗೆ ಬರುವಂತೆ ಮಾಡಬೇಕೆಂದೂ ಠರಾವು ಮಾಡಿದರು. ರಾಮಪ್ಪನವರು ಈಗ ಎಲ್ಲೋ ಬರ್ಮಾದಲ್ಲಿದಾರಂತೆ.

ಪಾತಾಳಿ.

" ಹೊಟ್ಟೆ ಹಸಿದಿದೆ, ಸ್ವಾಮಿ! ಒಂದು ರೂಪಾಯಿ ಕೊಡಿ, ಸ್ವಾಮಿ, ನಿಮ್ಮ ಧರ್ಮ! "

" ಆ! ಒಂದು ರೂಪಾಯಿ! "

" ಈಗಿನ ಬೆಲೆಯಲ್ಲಿ ಅಷ್ಟೂ ಬೇಡವೆ, ಸ್ವಾಮಿ? "

* * *

" ಟಿಕೀಟಿಲ್ಲದೆ ಎಷ್ಟೋಸಾರಿ ನಾನು ಬೆಂಗಳೂರಿಂದ ಕೆಂಗೇರಿಗೆ ಹೋಗಿ ಬಂದಿದೇನೆ "

" ಅದು ಹೇಗೋ? "

" ಉದ್ದಕ್ಕೂ ನಡಿಯೋದು! "

ನಗುವನಂದ

---o---

ಕನ್ನಡ ಮನಸ್ಸು ನಗೆ ಬಲ್ಲ ಮನಸ್ಸು. ನಗಬಲ್ಲ ಮನಸ್ಸು ಎಂದು 'ಜೀವನ'ದ ಸಂಪಾದಕ ರೊಮ್ಮೆ ಅಂದರು. ಇದಕ್ಕೆ 'ನಗುವನಂದ' ನಿದರ್ಶನ. ನಗೆಗೇ ಮೀಸಲಾಗಿರುವ ಮಾಸ ಪತ್ರಿಕೆಯೊಂದು ನಮ್ಮ ಜತೆಗೆ ಬಂದಿರುವುದು ನಮಗೆ ಹೆಮ್ಮೆಯ ವಿಷಯ—ಜನರಿಗೆ ನಮ್ಮ ಸೇವೆ ಬೇಕಾಗಿದೆ ಎನ್ನುವ ಧೈರ್ಯ ಕೊಡುತ್ತದೆ.

ಅಂದ ಚೆಂದದ ಮುದ್ರಣ, ವ್ಯಂಗ್ಯ ಚಿತ್ರಗಳು, ಟೀಕಾತ್ಮಕ ಹಾಸ್ಯ ಲೇಖನ ಗಳು, ನಕ್ಕು ನಗಿಸಲೆಂದು ಬರೆದ ಲೇಖನಗಳು, ಇವೆಲ್ಲವೂ ತುಂಬಿ ಬಂದಿರುವ ಸಂಚಿಕೆ.

'ನಗುವನಂದ' ನಂದನವನದಲ್ಲಿ ನಗುನಗುತಾ ಬೆಳೆದು ಪ್ರವರ್ಧಮಾನಕ್ಕೆ ಬಂದು, ಕನ್ನಡಿಗರೆಲ್ಲರನ್ನೂ ಹಾಸ್ಯದ ಹೊನಲಲ್ಲಿ ತೇಲಿಸಲೆಂದು ಹಾರೈಸುತ್ತೇವೆ.

---o---

ತ್ರಿಮೂರ್ತಿಗಳ ಮಹಾ ಸಮ್ಮೇಳನದಲ್ಲಿ ಒಂದು ದಿನ ಅಧ್ಯಕ್ಷ ಟ್ರೂಮನ್ ರವರು ಪಿಯಾನೊ ಬಾರಿಸಿದರಂತೆ!............ ಸ್ಟಾಲಿನ್ ಕೂಡ ಮಾತನಾಡಲು ಚರ್ಚಿಲ್ ಒಪ್ಪಿದ ತಕ್ಷಣ ಪಿಯಾನೊ ನಿಲ್ಲಿಸಿದರಂತೆ.

— —

"ಸ್ವಾಮಿ! ಗಾಡಿ ಬೇಕೆ? ಗಾಡಿ ಬೇಕೆ? ಸ್ವಾಮಿ!........ಸ್ವಾಮಿ!"

"ಯಾಕಪ್ಪ! ನಿನಗೆ ಬೇಡವೇನು?"

---o---



ಮಾಟಗಾರ— ಮುಚ್ಚಿದ್ದೆಲ್ಲಾ ಮಾಯ

ಮ ಹಾ ಪ ತ ನ

(ಗೋಳಿನ ಹಾಡು)

ಧರಣಿ ಮಂಡಲ ಪಡುವಲೊಳಗೆ
ಮೆರೆಯುತಿರುವಿಂಗ್ಲಂಡ ದೇಶದೊ
ಳಿರುವ ಚರ್ಚಿಲನೆಂಬ ಟೋರಿಯ
ಪತನ ನಾನೆಂತು ಪೇಳುವೆ ?

ಹಬ್ಬಿದಾ ಮನಸ್ತಾಪದೊಳಗೆ
ಅದ್ಭುತದ ಜಯ ಗಳಿಪೆವೆಂದು
ಅಬ್ಬರಿಸಿತು ವೋಟ ಬೇಟೆಗೆ
ಎಲ್ಲರೂ ತಾವಿಳಿದರು.

ಮೇಲೆ ಬಿದ್ದು ನಿಮ್ಮನೀಗಲೆ
ಬೀಳ ಹೊಯ್ವೆನು ನಿಮ್ಮ ಪಾರ್ಟಿಯ
ಸೀಳಿ ಬಿಡುವೆನು ಎನುತ ಖುಷಿಯಲಿ
ಟೋರಿ ಕ್ಲಿಕ್ಕರು ಕೂಗುತ

ಗೆದ್ದ ವೇಳೆಗೆ ಸಿಕ್ಕಿದಡ್ವಾನ್—
ಟೇಜ ಖಾಲಿ ಬಿಡಲು ನಾವು
ಹಸುಳೆ ಕುರಿಗಳೆ ? ಮತ್ತೆ ಬರುವೆವು !
ಹುಸಿಯಮಾತಲ್ಲೆಂದರು.

“ ಆರ್ಗೆ ವೋಟನು ಕೊಡಲಿ ದೇವರೇ ?
ಆರ ಪಾರ್ಟಿಯ ಗೆಲಿಸಲಿ ?
ಆರ ದೂಡಲಿ ? ಆರ ಒಲಿಸಲಿ ?
ಆರು ನಮಗೆ ಹಿತವರು ? ”

“ ಅಮ್ಮಗಳಿರ ! ಅಪ್ಪಗಳಿರ !
ನಮ್ಮ ಜಂಭದ ಕಂಭಗಳಿರ !
ನಿಮ್ಮ ವೋಟನು ನಮಗೆ ತುಂಬಿರಿ,
ಹೆಮ್ಮೆಯಿಂದಲಿ ಬೇಗನೆ ! ”

" ಲೇಬರೆಂದರೆ ಎಡದ ಮಗ್ಗಲು—
ಕೆಂಪು ಬಣ್ಣಕೆ ತೀರ ಹತ್ತಿರ,
ಆಸ್ಕರಿಲ್ಲವು, ನಾಸ್ತಿ ಟೆಲ್ಲರು,
ಲಾಸ್ಕಿ ಮಾತೇ ವೇದವು ! "

" ಏವರೆ ನಮ್ಮ ತಾಯಿ ತಂದೆ !
ಪ್ರಾಫಿಟ್ ನಮ್ಮ ಸರ್ವ ಬಳಗ !
ಎಂಪಯರಿಗೆ ತಪ್ಪಿ ನಡೆದರೆ
ಮೆಚ್ಚಳಾ ಬ್ರಿಟಾನಿಯಾ ! "

ತಮ್ಮ ಲೀಡರ ಮುಂದೆ ನೂಕುತ
ಸುಮ್ಮ ಸುಮ್ಮನೆ ಕೂಗಿ ಕುಣಿಯುತ
ಹಮ್ಮು ಬಿಮ್ಮಲಿ ಟೋರಿ ವೀರರು
ತುಂಬು ನೆಮ್ಮದಿ ಪಡೆದರು

ಉದಯ ಕಾಲದೊಳೆದ್ದು ಚರ್ಚಿಲ
ಸುಡುವಿಮಾನದಲೇರಿಕೊಂಡು
ಮುದದಿ ಜರ್ಮನ್ ಗಗನದಲ್ಲಿ
ಹವನ ಸಿಗರನು ಹಚ್ಚಿದ

ಹಳೆಯ ಡೌನಿಂಗ್ ಹತ್ತರಲ್ಲಿ
ಹೊಗೆಯ ಹೀರುತ ಹೊಸ್ತಿಲಲ್ಲಿ
ಗೆಳೆಯ ಗುಂಪನು ಹೆಸರ ಹಿಡಿದು
ಬಳಿಗೆ ಕರೆದನು ತವಕದಿ

" ಅಮೆರಿ ಬಾರ, ಬೆಲಿಷ ಬಾರ,
ಬ್ರೆನ್‌ಡನ್ ಬ್ರಾಕ್ಕನೆ ನೀನು ಬಾರ,
ಮ್ಯಾಕಮಿಲ್ಲನೆ, ಬೇಗ ಬಾರ,
ಅಳಿಯ ಸಾನ್‌ಡಿಸ ಕರೆದನು "

" ಮಗನೆ ಬಾರ, ಯುದ್ಧಶಾಖೆಯ
ಹುದ್ದೆಯಲ್ಲಿ ಒದ್ದೆಯಾಡಿದ
ಗ್ರಿಗ್ಗೆ ಬಾರ, ಹಿಗ್ಗು ಬಾರ,
ರಿಚರ್ಡ್‌ಲಾ-ನ ಕರೆದನು ."

“ ಎಲ್ಲಿ ನೀವು ಧ್ವನಿಯು ಕೇಳಿ
ಅಲ್ಲೆ ನಿಂತಿರ ? ಬನ್ನಿ, ಬೇಗ,
ಲಲ್ಲೆಯಾಡಲು ಇಲ್ಲ ಸಮಯವು,
ಇಲ್ಲೆ ಬನ್ನಿರಿ, ಎಲ್ಲರೂ ”

ಲೆಪೊಲ್ಡಾಮರಿ ಎಂಬ ವೃದ್ಧನು
ತನ್ನ ಮೇಸ್ತ್ರಿಯು ಕರೆಯು ಕೇಳಿ
ಮುನ್ನ ಬರಲು, ಕೂಲಿಯೊಬ್ಬನು
ಚಿನ್ನ ಟಾಂಗನು ಕೊಟ್ಟನು.

ಅಡಗಿ ನಾಡಿನ ಪೋಲಿಂಗ್ ಬೂತದಿ
ಸಿಡಿವ ರೋಷದ ಲೇಬರಾ ಮತ
ಘುಡು ಘುಡಿಸಿ ಭೋರಿಡುತ ಭಂಗನೆ
ತುಡುಕಿ ಎರಗಿತು ರಭಸದಿ

ಇಂದೆನಗಧಿಕಾರ ಸಿಕ್ಕಿತು
ಎಂದು ಬೇಗನೆ ಅಟ್ಲೆಮಂಡಲ
ಬೆವಿನ ಮಾರಿ-ಸನ್ನ ಗ್ರೀನ್‌ವುಡ್
ಬಂದು ಬಳಸಿತು ಸ್ಪೀಕರ !

—ಪಾತಾಳಿ.



ಏನು ಜೋಯಿಸರೆ— ಯಾವಾಗ ......ಶ್ರಿ ಪದವಿ ......?

ಗುಲಾಬಿಯ ಹೆಸರು

"ಹೆಸರಲ್ಲೇನಿದೆ, ಮಹಾ! ಗುಲಾಬಿಯನ್ನು ಜುಲಾಭಿ ಅಂತ ಹೇಳಿದರೂ ಬಾಧಕವೇನೂ ಇಲ್ಲ" ಅಂತ ಷೇಕ್ಸ್ಪಿಯರ್ ಹೇಳಿದ. ಆದರೂ, ಹೆಸರಿಂದ ಆಗುವ ಅನರ್ಥಗಳು ಬಹಳ ಇವೆ. ನನಗೆ ಈ ವಿಷಯ ಮುಂದಟ್ಟಾದದ್ದು ಮೊನ್ನೆ ಮೊನ್ನೆ. ನಾನು ನಮ್ಮೂರ ಗೋರಕ್ಷಣಾ ಸಮಿತಿಯ ಕಾರ್ಯದರ್ಶಿಯಾಗಿ ಹತ್ತಿಪ್ಪತ್ತು ವರ್ಷಗಳಿಂದಲೂ ದುಡಿಯುತ್ತಿರುವ ವಿಷಯ ಕೊರವಂಜಿಯ ವಾಚಕರಿಗೆ ತಿಳಿದಿರ ಬಹುದು. ಹುಟ್ಟಿಸಿದ ದೇವರು ಹುಲ್ಲುಮೇಯಿಸದೆ ಇರುತ್ತಾನೆಯೇ ಎಂದು ನಂಬಿದ್ದ ಆ ಬಡಪ್ರಾಣಿಗಳನ್ನು ದೇವರೇ ಕೈ ಬಿಟ್ಟಾಗ ಅವಕ್ಕೆ ಗ್ರಾಸಹಾಕುವುದೇ ನನ್ನ ಕೆಲಸ. ನಮ್ಮೂರಲ್ಲಿ ನಾನು ಅನೇಕ ಪುರಪ್ರಮುಖರನ್ನೂ ನಗರ ಪಿತೃಗಳನ್ನೂ ಮೂಕಸೇವಾನಿರತರನ್ನೂ ಭೇಟಿಮಾಡಿ ಪಶುಗಳಿಗಾಗಿ ಕಾಲುಕಟ್ಟಿದೆ. ಕಡೆಗೆ ಹುಲಿ ರಾಯರು ನನ್ನ ಸೇವಾಕಾರ್ಯಕ್ಕೆ ಮೆಚ್ಚಿ ತಾವು ಎಂಟು ಸಹಸ್ರ ರೂಪಾಯಿಕೊಡು ವುದಾಗಿಯೂ, ಆ ಹಣದಿಂದ ಒಂದು ಕೊಟ್ಟಿಗೆಕಟ್ಟಿಸಿ, ಅದನ್ನ ಪ್ರಧಮ ಮಂತ್ರಿಯ ರೆವಿನ್ಯೂ ಹಸ್ತದಿಂದಲೇ ಓಪನ್ ಮಾಡಿಸಬೇಕೆಂಬುದಾಗಿಯೂ ಹೇಳಿದರು. ನನಗೆ ಚತುರ್ಭುಜಗಳು ಬೆಳೆದವು. ಆ ಸಂತೋಷದ ಸುದ್ದಿಯನ್ನೇ ನಾನು ಮೆಲುಕು ಹಾಕಿದೆ. ಆದರೆ, ಅವರು "ಗೋಶಾಲೆಗೆ" ತಮ್ಮ ಹೆಸರನ್ನೇ ಇಡಬೇಕೆಂದು ಒತ್ತಾಯಪಡಿಸಿದಾಗ........ನನ್ನ ಸಪ್ತನಾಡಿಗಳೂ ನಿಂತು ಹೋದವು.... "ಹುಲಿ ರಾಯರ ಗೋಶಾಲೆ"!....ಸಾಧ್ಯವೇ ? ಆಗಬಹುದೆ ? ಸಮ್ಮತವೇ ? ಧರ್ಮವೇ ? ಎಂಟು ಸಹಸ್ರಕ್ಕೂ ತಿಲಾಂಜಲಿ ಇತ್ತು, ಮತ್ತೆ ಚಂದಾಪಟ್ಟಿ ಸಹಿತ ಊರೂರು ತಿರುಗುತ್ತಿದ್ದೇನೆ, ತಮಗೆ ತಿಳಿದಿರುವಹಾಗೆ....ಹೆಸರಲ್ಲೇನಿದೆಯಂತೆ ? ಷೇಕ್ಸ್ಪಿಯರ್ ಒಬ್ಬ ಮಹಾಕವಿಯಂತೆ !

ಸಾಹುಕಾರ್ ಹುಚ್ಚಪ್ಪನವರು ಹತ್ತು ಸಹಸ್ರ ಕೊಟ್ಟರೂ, ಅವರ ಹೆಸರನ್ನ ಯಾವ ಶಾಲೆಗಾದರೂ ಇಡಲು ಸಾಧ್ಯವೇ? ಯಾವುದೂಬೇಡ, ಹುಚ್ಚಾಸ್ಪತ್ರೆಯವರು ಕೂಡ ಅವರ ದಾನವನ್ನು ಸ್ವೀಕರಿಸುವ ಹಾಗಿಲ್ಲ. ಹುಚ್ಚಾಸ್ಪತ್ರೆಯಲ್ಲೇ "ಹುಚ್ಚ

ಪ್ಪವಾರ್ಡ್" ! .... ಹೇಗಿದೆ ? ಹಾಗೆಯೇ, ಅಕ್ಕತಂಗಿಯರ ಮೇಲಿನ ಕನಿಕರದಿಂದ ಸಾಕಮ್ಮ ಯಾವ ಹೆರಿಗೆ ಆಸ್ಪತ್ರೆಗೂ ಹಣ ಕೊಡುವ ಹಾಗಿಲ್ಲ. ಕೊಟ್ಟರೂ, ತನ್ನ ಹೆಸರನ್ನು ಅದಕ್ಕೆ ಲಗತ್ ಮಾಡುವಂತೆ ಒತ್ತಾಯ ಪಡಿಸುವಹಾಗಿಲ್ಲ. ಪಡಿಸದೆ ಇದ್ದರೂ, ಅವರಾಗಿ ಅವರು ಕೃತಜ್ಞತಾಪೂರ್ವಕವಾಗಿ ನಾಮಕರಣ ಮಾಡುವ ಹಾಗಿಲ್ಲ.

" ಹಯವದನ ರಾಯರ ಸಂಗೀತಶಾಲೆ " " ಚಕ್ರಪಾಣಿ ಚೌಕ " " ಹನುಮಂತರಾಯನ ಕಲಾಮಂದಿರ " " ಕಾಡಯ್ಯ ನವರ ಉದ್ಯಾನವನ " " ಮೂಗಯ್ಯ ನವರ ಮೂಗರ ಪಾಠಶಾಲೆ " " ಫಕೀರಪ್ಪನವರ ಅನಾಥಾಲಯ " " ಎಂ. ಕೆ. ಸಣ್ಣಪ್ಪನವರ ವ್ಯಾಯಾಮಶಾಲೆ " " ಕಣ್ಣಪ್ಪಶೆಟ್ಟಿಯಾರ್ ರವರ ಕುರುಡಾಸ್ಪತ್ರೆ " " ಅನ್ನಪೂರ್ಣಮ್ಮ ಅಶಕ್ತ ಪೋಷಕನಿಲಯ " --ಎಲ್ಲವೂ ಅಸಮಂಜಸ ! ಏಕೆ ಹಣವಿದ್ದರೆ ಸಾಲದು ; ದಾನ ನೀಡುವ ಮನ ಇದ್ದರೆ ಸಾಲದು ; ನೆಟ್ಟ ಸಂಸ್ಥೆಗೆ ಉಪಯೋಗವಾಗುವಂತಹ ಪುಟ್ಟ ಹೆಸರೂ ಇರಬೇಕು. " ಮಂಗೇಶ ಶಿಶುವಿಹಾರ " ಆಗಬಹುದೆ ? ಮಂಗೇಶರಾಯರು ಒಂದು ಲಕ್ಷ ಕೊಟ್ಟರೂ, ನಾನು ಲಕ್ಷ್ಯಮಾಡುವುದಿಲ್ಲ.

ನಾನು ಹುಲಿರಾಯರಿಗೆ ಹೇಳಿದೆ. " ತಮ್ಮ ಹೆಸರನ್ನೇನೋ ಗೋಶಾಲೆಗೆ ಇಡೋಣ. ಇಡುವುದರಲ್ಲಿ ನನಗೇನೂ ಅಭ್ಯಂತರವಿಲ್ಲ. ಕೊಟ್ಟಮಾತಿನಂತೆ ತಾವು ಹಣ ಕೊಟ್ಟುಬಿಡಿ. ಅದರಿಂದ ಹತ್ತು ರೂಪಾಯಿ ತೆಗೆದು ಸರ್ಕಾರಕ್ಕೆ ಕಳುಹಿಸಿ ನಾನು ಮೊದಲು ತಮ್ಮ ಈಗಿನ ಹೆಸರನ್ನ ಬದಲಾಯಿಸಿ ಬೇರೊಂದನ್ನ ಹಾಕುತ್ತೇನೆ. ಅನಂತರ, ತಮ್ಮ ಹೆಸರನ್ನಿಡುತ್ತೇನೆ ಕೊಟ್ಟಿಗೆಗೆ " ಅಂದೆ. ಅವರು ಒಪ್ಪಲಿಲ್ಲ... ... ಇತರರು ಒಪ್ಪಿಯಾರು. ಇತರೇ ಕಾರ್ಯದರ್ಶಿಗಳು ಪ್ರಯತ್ನ ಮಾಡಬಹುದು.

— ಪಾರಾಳಿ.

———o———

ಪುಡಿ — ಪುಡಿ

(ಒಂದು ಆಧುನಿಕ ಕವನ)

ಹಾಳಾಗಿ ಹೋಯಿತೀ ಲೋಕ
    ನನ್ನ ಮಾತನು ಕೇಳದೆ !

ವಾರ್ಪಾಗಿಹುದೆಲ್ಲ ನಾನು
    ನೇರ್ಪಡಿಸಲು ಬಲ್ಲೆನು !

ನನ್ನ ನಾನು ಕಾಂಬ ತೆರದಲಿ
    ಎಲ್ಲರೆನ್ನನು ಕಂಡರೆ,

ನನ್ನ ಗ್ರಂಥದ ಕಂತೆ ಎಲ್ಲವ
    ಒಂದು ಬಿಡದೆ ಕೊಂಡರೆ,

ಕೊಂಡು ತಂದುದ ಕಿಂಚಿತಾದರು
    ಓದಿ ಜೀವದಿ ಉಳಿದರೆ,——

ಕೂಲಿ-ಮಾಲಿಕ, ಮೇಲು-ಕೀಳಿಗ,
    ಜರಿ-ಕಿರಿತನ, ಬಡತನ,

ಹುಚ್ಚು ಚರ್ಚಕರರ್ಚಕಾದಿ
    ಗಳೆಲ್ಲರೀಗಲೆ ಪುಡಿ ಪುಡಿ

—ರಾಮಚಂದ್ರ.

''ಕೋ ೯ ೯ ಳೀ ಕೆ ರಂಗ''

ಅ ಥ ವಾ

'ಗುಂಡೂ'ಪಂಡಿತನ ಕನಸು

[ಇದರೊಳಗಿನ ಪಾತ್ರಗಳೆಲ್ಲ ಕೈಲಾಸಂ ನಾಟಕದ ಪಾತ್ರಗಳು]

———o———

ಸೀನ್ ೧ : ಅಧ್ವಾನ ವನ

(ನೇಪಥ್ಯೇ—" ಕೋ ಓ ಓ ಳೀ ಕೆ ರಂಗಾ ಾ ")—

ಪಂಡಿತ—ಅದು ಯಾರೋ ಅದು ...ನಮ್ಮ ಗುಂಡೂ ಹಾಡು ಹಾಡೋದು ?

ರಂಗ—ಇದೇನಪ್ಪಾ ತಕರಾರು ? **ನಾನು** ! ಕೋ ೯ ೯ ಳೀಕೆ ರಂಗಾ ಾ !

ಪಂಡಿತ—ಹಾಡು ಹಾಡಿದ್ದೆ ನೀನೋ ? ಇಲ್ಲ ಕೋಳೀಕೇ ರಂಗನೇ ನೀನೊ ?

ರಂಗ—ನಾನ್ ಕೋ ೯ ೯ ಳೀಕೆ ರಂಗಾ ಾ ! ನಾನೇ !

ಪಂಡಿತ—' ಹೆಸರು ನೋಡಿದರೆ ರಂಗಣ್ಣ, ಮುಸುಡಿ ನೋಡಿದರೆ ಮಂಗಣ್ಣ' ಅಂದ ಹಾಗಿದೆಯಲ್ಲ........ನಿನ್ನ ಸುಟ್ಮ್ಹೋರೆ ?

*   *   *

ಕಪ್ಪಣ್ಣ—ಕ್ಷಮಿಸಿ, ಸಾರ್, ಮರ್ಯಾದೆ ಕೊಟ್ಟು ಮರ್ಯಾದೆ ತಗೊಳ್ಳೋದೆ ಮರ್ಮ, ಸಾರ್, ಮಹನೀಯರ್ರು ! ಹಾಗೆಲ್ಲ ಅನ್ಬಾರ್ದು.

ಪಾತೂ ಅಣ್ಣ ಕಿಟ್ಟಿ—ಅಮ್ಮಾ ! ನೋಡಮ್ಮ ಇವನು ನನ್ನ insult ಮಾಡ್ತಾನೆ! ನನಗೆ ಮರ್ಯಾದೆ ಇಲ್ಲ ಅಂತಾನೆ !

ಪಾತೂ—ಥೂ ! ಸಾಕು ಬಿಡೊ ! ನಿನ್ನ ಮೂತಿಗಿಂತ ದೊಡ್ಡ insult ಯಾರೂ ಮಾಡೋ ಹಾಗಿಲ್ಲ !

ಕಿಟ್ಟಿ—What is less for my face, I say !

ಪಾತೂ—what is lessಏ ? ಒಂದು ಮುಖವಾಡ lessಉ !

ಕಿಟ್ಟಿ—ನೋಡಮ್ಮ ಇವಳ್ನ !

ನಂಜಾಪುರದ ನರಸಿಂಹಯ್ಯ— Personal assault ಅನ್ನೋದು ಅವಳ ಪಟ್ಟೀಲಿ ಇಲ್ಲ ಕಣಯ್ಯ !

ಸ್ಟ್ಯಾಟ್‌ಮಾಸ್ಟರ್—ನೀನಾರೋ ಮಾತಾಡೊಕ್ಕೆ ? ಅವನ್ ಲಾಯರೀನೆ ?

ಪೋಲಿ ಕಿಟ್ಟಿ—ಛಾರ್ಜ್ ತಗೊಂಡಿದ್ದೇನೆ ಸಾರ್ ಅವನ್ನ....ಅಲ್ಲ, ಅವನು ನನ್ ಡೋಸ್ತು........ (ಸ್ವಗತ) ನಾನು ! ? ನಾನೋ !........ನಿಂ ತಾತ್ನೋ. ನ್ಯೈನೋಡಿ ಮಾತಾಡೋ ಮುಗ್ಗೈ !

ಮಗು—ಮುಗ್ಗೈ ಅಂದ್ರೇನೋ ಅಪ್ಪೂ ?

ಅಪ್ಪೂ—ಅದು ತುರ್ಕ್ನಲ್ಲಿ ಕೋಳೀಗೆ ಹೆಸ್ರೋ !

ಸರೋಜ—you shut up........with·your cheap ತುರುಕು ಭಾಷೆ....

ಕಪ್ಪಣ್ಣ—ಏನ್‌ಸಾರ್ ನೀವೂನು ! ಆದೂ ಒಂದು ಹೆಂಗಸ್ಗೆ ಹೆದರ್ಕೊಂಡು....

ನಂಜಾಪುರದ ನರಸಿಂಹಯ್ಯ—ಅದೂ ಎಂಥ ಹೆಂಗಸು ಅಂತೀನಿ ? ತನ್ನ ಕೈಹಿಡಿದು ತನ್ನ ಮಕ್ಕಳ್ನ ಹಡೆದು........

ಅಹೋಬ್ಳು—ಏನ್ ಹೀಗಾಗ್ಹೋಯ್ತಲ್ಲ ನನ್ನ ಗತಿ ! ?

ಹಿರಿಯಣ್ಣಯ್ಯ— ಅಪ್ಪನೋ deadoo....mother ಓ againstಉ ... . therefore worse than deadoo....ಈಗೇನು ಮಾಡೋದು ಮತ್ತೆ ?

ನಾಗತ್ತೆ—ಮಾಡೋದು ಮತ್ತೇನು ? ಅವಲಕ್ಕಿ ಮೊಸರು ಮೆಲ್ಲೋದೇ!

ನಂಜಾಪುರದ ನರಸಿಂಹಯ್ಯ— ಮಾಡೋದು ಮತ್ತೇನಿದೆ ? ಅನಾದಿಯಿಂದ lay down ಆದ law of life and....ಮೃತ್ಯುನೇ !

ಅಹೋಬ್ಳು—still .... ಆಪತ್ಕಾಲೆ ನಾಸ್ತಿ ಮರ್ಯಾದೆ.

ನಂಜಾಪುರದ ನರಸಿಂಹಯ್ಯ—ಹೌದು....ವಿನಾಶಕಾಲೇ ವಿಪರೀತ ಬುದ್ಧಿಃ....ಆದರೆ ....ಯಾರ ವಿನಾಶಕಾಲ ಅನ್ನೋದು ಇತ್ಯರ್ಥವಾಗಬೇಕು.

ನರಸಮ್ಮ—ಇತ್ಯರ್ಥ ಮಾಡಿ ಹೇಳ್ತೀನಿ....ಇತ್ಕಡೆ ಬನ್ನಿ !

ಕಪ್ಪಣ್ಣ—ಸಾಕು, ಸಾರ್. ಅವರ ·ಜಗಳ ನಮಗೆ ಯಾಕೆ? let us come back to ಕಾಲರಾ.... I mean....ಕೋಳೀಕೆ ರಂಗಾ !

ಶೂರ್ಪನಖಾ ಕಿಟ್ಟಿ—ಥೂತ್ ! ಪರದೆ ಬಿಡ್ರೋ ! ಸೀನ್ ಕೆಟ್ಹೋಯ್ತು !

[ಪರದೆ]

[ಸೀನ್ 2. ರಾಮಪುರದ ಹಿರಿಯಣ್ಣಯ್ಯನ ಮನೆಯ ಹಜಾರ]

ಪಂಡಿತ—ಬಾರಯ್ಯ, ಕೋಳಿಕೆ ..ಅಲ್ಲ ...ಬನ್ನ್ರೀ... or better still.. ಬನ್ನಿ ರಂಗಪ್ನೋರೆ. ಅಥವಾ ರಂಗಣ್ನೋರೆ ಇಲ್ಲಾ ರಂಗಸ್ವಾಮಯ್ಯನವರೇ ಹ್ಯಾಗೆ ಬೇಕಾದ್ರೂ ಇಟ್ಕೊಳ್ಳಿ ...ಅಬದ್ಧಕ್ಕೇನು, ಪೇರಿಸಿಬಿಟ್ಟೇನು ಪರ್ವತದ ಹಾಗೆ . .ಬೇಕಾದರೆ.

ಬೋರ—ಹೌದು, ಬುದ್ಧಿ. 'ನಷ್ನಗ್ರ ಮನೆಗೆ ಬಂದೋರು ನಷ್ನಗ್ತಾನೇ ಮನೇಂದ ಓಗ್ಬೇಕೋ ಬೋರ' ಅಂತ ಹೇಳಿದ್ರು....ನನ್ನ ಬುಟ್ಬುಟ್ಹೋದ ನನ್ ಧಣಿ.

ಸುಬ್ಬಮ್ಮ—ಸಾಕ್ ನಿಲ್ಸೋ ......

ಪುಟ್ಟೂ ತಂದೆ— ....ನಿನ್ ಅಮಂಗಳ ಪದ್ಯಗ್ಳು !

ಕಪ್ಪಣ್ಣ—ನಮಗ್ಯಾಕೆ, ಬನ್ನಿ ಸಾರ್ ! let us go back to cholera—I mean...you know what I mean....ಕೋಳೀಕೆ ರಂಗಾ....

ಹಿರಿಯಣ್ಣಯ್ಯ—quite right, ಕಪ್ಪೂ....

ಪಾತು ತಂದೆ—ಏನು ಶಾಸ್ತ್ರಿಣಃ ?

★ ★ ★

ಪಂಡಿತ—ಆಗಬಹುದು........ಏನಯ್ಯ ನಿನ್ನ ಹೆಸರು ?

ರಂಗ—ನಾನ್ ಕೋ ೯ ೯ ಳೀಕೆ ರಂಗಾ !

ಪಂಡಿತ—ಬರೆಯೋದೂ ಹೀಗೇ.... ವೋ ವೋ ವೋ ಅಂತ ಒದರುವಾಯು ಬಂದ ಹಾಗೆ ಬರೀತೀಯ ? ಬರೆಯೋದು ಹೇಗೆ ?

ರಂಗ—'ಕೋ'ನು 'ಳೀ'ನು 'ಕೇ'ನು 'ರ'ನು ,ಸೊನ್ನೆ' 'ಗಾ' !

ಪಂಡಿತ—ಅದು ಗೊತ್ತಾಯ್ತು. ನೀನದನ್ನ ಬರೆಯೋದು ಹ್ಯಾಗೆ ಅಂತ ?

ರಂಗ—ಕಕೋತ್ವ-ಳೀ, ಕಕೇತ್ವ-ರ, ಮತ್ ಸೊನ್ನೆಯೂನೂ, ಗಾ !

ಪಂಡಿತ—ಈ ಅಧ್ವಾನ ಯಾರಯ್ಯ ಓದಬೇಕು ? ಹ್ಯಾಗಯ್ಯ ಓದಬೇಕು ?

ರಂಗ—ಇದ್ನ ಓದಾಕ್ ಬರ್ದೆ ಬಾಯ್‌ಬಿಡೋನು ಬೆಪ್ಪು ನನ್—ಗಾ !

ಪಂಡಿತ—ತ್ಥುತ್ ! ನಾಯಿಗ್ಹಾಕಿದ್ನಿನ್ನ ನ್ಮದುಚ್ಚಿಷ್ಹಾನ್ನರೀಗ್ಹಾಕಾ ! !

ರಂಗ—ಇದ್ನ್ ಓದಾಕ್ ಬರ್ದೆ ಬಾಯ್‌ಬಿಡೋನು ಬೆಪ್ಪು ಹಹ್ಹಹ್ಹಾ ! !

ಪಂಡಿತ—ಒಳ್ಳೆ ಪೋಲಿ ಬಂದ್ಸೇರಿದ್ಯಲ್ಲ ! ಎಲ್ಲಿ ಹುಟ್ಟಿದ್ಯೋ ನೀನು ?

ರಂಗ—ನಾನ್ ಉಟ್ಟಿದ್ದು ಒಡ್ಡರಳ್ಳಿ

ಪಂಡಿತ—ಬೆಳೆದದ್ದು ಎಲ್ಲೊ ?

ರಂಗ—ಬೆಳೆದದ್ದು ಬ್ಯಾಡರಳ್ಳಿ

ಪಂಡಿತ—ಮದುವೆ, ಮನೆ ಇತ್ಯಾದಿಗಳೆಲ್ಲ ?

ರಂಗ—ಮದುವೆ ಮಾದನ್ನಳ್ಳಿನ್ ವೊಲಗೋಳಾರನ್ನಳ್ಳಿ !

ಪಂಡಿತ—ಓಹೋ ! ಮಾದನಹಳ್ಳೀಲಿ ಮದುವೆ ! ಹಾರನಹಳ್ಳೀಲಿ ಹೊಲಾನೋ ! ....ಅದು ಸರಿ ! ನಿನ್ನ ಮಾತು ಹ್ಯಾಗೆ ನಂಬೋದು ?

ರಂಗ— ನಂ ಶಾನ್ಭೋಗಯ್ಯ
ಅಲ್ದೆ ಸೇಕ್ದಾರಪ್ಪ
ಇವ್ರೆಲ್ರೂ ಕಂಡವ್ರೆ ನನ್ನಾ !

ಪಂಡಿತ—ಓಹೋ ! ಸುಳ್ಳು ದೇವರಿಗೆ ಕಳ್ಳ ಪೂಜಾರಿ ! ಅದಿರ್ಲಿ....... ನಿಜವಾಗಿ.... ನಿನ್ ಹೆಸರೇನು ?

ರಂಗ—ನಾನ್ ಕೋ ಽ ಽ ಳೀಕೆ ರಂಗಾ !

ಪಂಡಿತ—ನಮ್ ತಿಪ್ಪಾರಳ್ಳಿ ಬೋರ ಗೊತ್ತಾ ನಿನಗೆ ?

ರಂಗ—ನಾನ್ ಕೋ ಽ ಽ ಳೀಕೆ ರಂಗಾ
ನಮ್ ತಿಪ್ಪಾರಳ್ಳಿ ಬೋರನ್ ಅಣ್ಣನ್ ತಮ್ಮನ್ ದೊಡ್ಮಗಾ !

ಪಂಡಿತ—ಓ ! ಅದಕ್ಕೇ ಈ ಗೈರತ್ತು . ಗರಜು,....ಜೂರತ್ತು....ಈ ಗಂಡಸ್ತನ! ....ಸರಿ, ನಂ ಬೋರನ ಹೆಂಡರ ಹಾಗೇನೇ ನಿನ್ ಹೆಂಡರ್ಗೆ... ಏನೋ ಹೆಸರು ?

* * *

ಕಪ್ಪಣ್ಣ—ಏನ್ ಸಾರ್ ! What is in a nameoo ? A rose smells as sweetoo by any other nameoo....ಷೇಕ್ಸ್ಪಿಯರ್ ಹೇಳ್ದಂಗೆ ..... .

ಜೀವು—ನೀವ್ಬೆಡೋದೆಲ್ಲಾ. ನಿಮ್ದು ಬಂಡವಾಳವಿಲ್ಲದ ಬಡಾಯಿ.... ನಿಮ್ಮ ಇಂಗ್ಲಿಷ್ ಬೆರೆಸಿದ ಕನ್ನಡ ...ಅದಕ್ಕೇ ಗೋಳು ಮನೇಗೆಲ್ಲ !

ಅಹೋಬ್ಲು—ಹೆಂಗಸ್ರೇ ಹೀಗೆ.../.ಹುಮ್ಮಸ್ಸೇ ಇಲ್ಲ !

ಶೂರ್ಪನಖಾ ಕಿಟ್ಟಿ—ಥೂತ್ ! ಬನ್ರೋ ಈಚೆ ! ರಿಹರ್ಸಲ್ ಅಲ್ಲಾ ಇದು !—
ನಾಟ್ಕ !

✤ ✤

ಪಂಡಿತ—ಏನಯ್ಯ ? ಏನ್ ನಿನ್ನ ಹೆಂಡರ ಹೆಸರು ?

ರಂಗ—ಹೆಸರೇನ್ ಬುದ್ದಿ ?

ನೋಡ್ಬೇಕ್ರಾ ನಂ ನಂಜೀನಾವ !

ನಂ ಗಜನಿಂಬೆ ನಂಜೀನಾವ !

ಅವ್ಳ ನಕ್ರೆ ಗುಂಡ್ಗೆ ಗುಡಗ್ತೈತೆ ಜುಂ ಜುಂ ಜುಂ !

ಅವ್ಳ ವಾರ್ಗಣ್ಣಿನ್ ನೋಟಕ್ಕೇವ

ಅವ್ಳ ಕೀಟ್ಲೆ ಆಟದ್ ಕಾಟಕ್ಕೇವ

ನಂ ಅಳ್ಳೀಲಿರೊ ಐದರೆಲ್ಲ ಗುಂ ಗುಂ ಗುಂ !

ಪಂಡಿತ—ಓಹೋ ! ಪುಣ್ಯಮಾಡಿದ್ದೆ ನೀನು !

ರಂಗ— (ನಂಜಿ) ನೀರಿಗ್ ಬರೊ ಝೋಕ್ನಾವ

(ನಂಜಿ) ನೀರ್ ಸೇದೊ ಷೋಕ್ನಾವ

ಮಿರ್ಸ್ಸಿದ್ ಉಡಿಗೀರ್ ಅಳ್ಳೀಲೇ ಇಲ್ಲಾ !

ಅವ್ಳ ಅಟ್ಟೆ ಸಾರ್ಸೊ ಅಂದಾನಾವ

ಅವ್ಳ ತಟ್ಟಿದ್ ಬೆರ್ಣಿ ಚೆಂದಾನಾವ

ನೋಡಿ ನೋಡಿ ಸುಸ್ತಾಗಿನ್ನಿ—ನಾನೇನೇಳ್ಲಿ ! !

ಚಿನ್ನದ್ ಗೊಂಬೆ ನಂಜಿ !

ರನ್ನದ್ ಗೊಂಬೆ ನಂಜಿ !

ಅವ್ಳ ಕಣ್ಣು ನೋರೆ ತಾವ್ರೆ ಕಾರಂಜಿ !

ಅವ್ಳ ಮೂತಿಗೆ ನಾ ವುಚ್ಚು !

ಅವ್ಳ ಮಾತಿಗೆ ನಾ ಬೆಚ್ಚು !

ನಂಜೀ ನನ್ ಅಪರಂಜೀ !!!

ಪಂಡಿತ—ಮಾದನ ಹಳ್ಳೀಲಿ ಯಾರಯ್ಯ........ನಿನ್ನ ನಂಜಿ ತಂದೆ ?

ರಂಗ—ಅವ್ಳ ತಂದೆ ಅಂಗಿರ್ಲಿ, ಬುದ್ದಿ. ಅವಳ್ನ ನೋಡ್ಬೇಕ್ರ!

ನೋಡ್ಬೇಕ್ರ ನಂ ನಂಜೀನಾವ
ನಂ ಗೌಡನ್ ಮಗಳ್ ನಂಜೀನಾವ
ಅವ್ಳ ಅಟ್ಟೀಲೆಲ್ಲ ಅವಳ್ದೇ ದರ್ಬಾರ್ !
ಅವ್ಳ ಅಯ್ನೆಟ್ಟೆ ರೇಗ್ಲಿ
ಅವ್ಳ ಅವ್ವೆ ಯೆಟ್ಟೆ ಕೂಗ್ಲಿ
ನಂಜಿ ಬುಟ್ರೆ ಬಾಯಿ ಅಳ್ಳಿಅಳ್ಳೀನೆ ಉಜಾರ್ !

ಪಂಡಿತ—ಮತ್ತೆ....ಅಂಥೋಳು—ನಿನ್ನ ಮೂತಿ ನೋಡಿ ಒಪ್ಪಿದ್ಲೆ ?

ರಂಗ— ನಂಜೀನ್ ಮದ್ವೆ ಮಾಡ್ಕಳ್ಳಾಕೆ
ನಂಜೀನ್ ಅಟ್ಟೀಗ್ ತಂದ್ಕಾಳ್ಳಾಕೆ
ನಾನ್ ಪಟ್ಟಿದ್ದೆಲ್ಲಾ ಸಿವನೇ ಬಲ್ಲಾ !

ಪಂಡಿತ—ಮಕ್ಕಳು ಮರಿ ಏನಾದ್ರೂ ಉಂಟೋ ...ನಿಮಗೆ ?

ರಂಗ— ಈಗ್ನನ್ನೂ ನನ್ ನಂಜೀನೂವೆ
ನಮ್ಮಿಬ್ರೈದ್ನು ಪುಟ್ನಂಜೀನ್ವೆ
ಮೀರ್ಸಿದ್ ಅಟ್ಟೆ ಅಳ್ಳೀಲೇ ಇಲ್ಲಾ !

ಪಂಡಿತ—ಮಗು ಹ್ಯಾಗಿದ್ದಾಳೆ ? ನಿನ್ನ ಹಾಗೋ ? ಇಲ್ಲ ಅವರ ತಾಯಿ ಹಾಗೋ ?

ರಂಗ— ಚಿನ್ನದ್ ಗೊಂಬೆ ದೊಡ್ನಂಜಿ !
ರನ್ನದ್ ಗೊಂಬೆ ಪುಟ್ನಂಜಿ !
ಅವ್ರಿಬ್ಬರ್ ಮೋರೆ ತಾವ್ರೆ ಕಾರಂಜಿ !
ಅವ್ರ ಮೂತಿಗೆ ನಾ ಪುಚ್ಚ್ಕ !
ಅವ್ರ ಮಾತಿಗೆ ನಾ ಬೆಚ್ಕ !
ಇಬ್ರೂSS ನನ್ ಅಪರಂಜೀ ! !

ಪೋಲಿಕಿಟ್ಟಿ—ಹುಷಾರ್ರೋ ಲ್ರೋ! ಹುಚ್ಚ್ಮುಂಡೆ! ಮಗು ಮಲಕ್ಕೊಂಡಿದೆ ವಳ್ಗೆ! ...ಶ್ಯ್!

ಪುಟ್ಟೋ ತಂದೆ—ಇದನ್ನೇ ಸಂಸಾರ ಅನ್ನೋದು! ಈ ಕೂಸು ಬೇರೆ ...ತಲೆ ಹುಯ್ಯೋ ಕಾಲಕ್ಕೆ ಸರಿಯಾಗಿ ತಲೆಶೂಲೆ ಬಂದ್ಹಾಗೆ.... ಏನು ಬೇಬಿಗಳೋ!

ಯಜಮಾನ್ರು—Baby be damned! ಮನೆಗಳಲ್ಲಿ ಕೂಸುಗಳು ಹುಟ್ಟಿದ್ರೆ cradles ಅಲ್ಲ ಕೊಂಡ್ಕೋಬೇಕಾದ್ದು. ..chloroformoo!

ಶೂರ್ಪನಖಾ ಕಿಟ್ಟಿ—ದಯವಿಟ್ಟು ಇದು ನಾಟಕಾ ಅಂಬೋದ್ನ ಮರೀದೆ.... ನಿಮ್ಮ ಮಾತಿಗೆ ತುಂಡು ಹಾಕಿ.... ಹಚಾ!

* * *

ಪಂಡಿತ—ಬೋರ ಬಸವೀನ ಕರಕೊಂಡು ಬೆಂಗಳೂರಿಗೆ ಬಂದಿದ್ನಂತೆ? ಹಾಗೆ.... ರಂಗ.... ನೀನೇನಾದರೂ ನಂಜೀನ ನಡಸ್ಕೊಂಡು.... ನಾಗಸಂದ್ರಕ್ಕೆ....

[ಕಪ್ಪಣ್ಣ—ಏನ್ ಸಾರ್ ಇದು! ನಿಮ್ಮ ಪ್ರಾಸ! ನಾನೂ ನೀವೂ ಸೇರಿಬಿಟ್ರೆ terrible ಪ್ರಾಸದ couple ಆಗ್ಹೋಗ್ತೀವೆ? ಅಲ್ವೆ?.... ಓ, ಕ್ಷಮಿಸಿ ಬೋರಣ್ಣೋರೆ........ ಅಲ್ಲ ರಂಗಣ್ಣೋರೆ .... ಯಜಮಾನ್ರು ಏನೋ ಕೇಳ್ತಿದ್ರು....]

ರಂಗ—ಇಲ್ಲ, ಬುದ್ಧಿ. ಆದ್ರೆ ನಾ ಒಂದ್‌ಸಲ ಮೈಸೂರಿಗೆ ಪೋಗಿದ್ದೆ. ಅದೇನೇಳ್ಲಿ!

ಎತ್ತು ಕುದುರೆಯಿಲ್ದ್ ಗಾಡಿಗ್ಳೂವೆ
ಬತ್ತಿ ಯೆಣ್ಣೆಯಿಲ್ದ್ ದೀಪಗ್ಳೂವೆ

ಕುದ್ರೆಯಿಲ್ದ್ ಗಾಡಿಗ್ಳು ಎಣ್ಣೆಯಿಲ್ದ್ ದೀಪಗ್ಳು ತುಂಬಿದ್ ಮೈಸೂರಿಗೆ ಬಂದೆ!

ಪಂಡಿತ—ಏನ್ಮಾಡ್ದೆ? ಬೋರ ಲಾಲ್‌ಬಾಗ್‌ನಲ್ಲಿ ಬೋನ್ನೊಳಕ್ ನುಗ್ಗಿ ಹುಲೀನ ನವರಿದ ಹಾಗೆ ...

ರಂಗ—ಇಲ್ಲ ಬುದ್ಧಿ. ನಾನು ಎಷ್ಟಾದರೂ 'ಅವನ್ ಅಣ್ಣನ್ ತಮ್ಮನ್ ದೊಡ್ಮಗಾ'. ನಾನು ಮೈಸೂರಿಗೆ ಬಂದೋನೆ—

ದೊಡ್ ಚೌಕದ್ ಮುಂದೆ
ಗಡಿಯಾರದ್ ಹಿಂದೆ
ಕಟ್ ತಂದಿದ್ ಬುತ್ತೀನ್ ತಿಂತಿದ್ದೆ.
ಅಲ್ಲೊ ಕುದುರೆ ಮೇಲ್ ಕುಂತಿದ್ದೊಬ್ ಸವ್ವಾರಯ್ಯ
ಕೆದ್ರಿದ್ ತನ್ ಮೀಸೇಮೇಲ್ ಆಕ್ತ ಕಯ್ಯ

ಬೆದ್ರಿಸ್ತಾಲೀ—ನನ್ನ

ಗದ್ರಿಸ್ತಾಲೀ :

‘ ನೀನ್ ಯಾರೋ ? ’... ‘ ನೀನ್ ಯಾಕೋ ? ’ ಅಂತ ಸವಾಲ್ ಹಾಕ್ತಾನೆ....
ನನ್ಗೆ !....ನಂ ಬಸ್ತೀನೆಲ್ಲ ಬೆದರ್ಸೋ ಭೂಪತೀಗೆ !....ಹೊತ್ತ್ ಮುಳುಗುತ್ಲೂವೆ ನಂ ಕೇರೀನೆಲ್ಲ ಗಡಗಡಾಯ್ಸೋ ನನ್ಗೆ....ಭೂಪತೀಗೆ ! !

ಪಂಡಿತ—ಅದಕ್ಕೆ ನೀನ್ ಏನ್ ಅಂದೆ ?

ರಂಗ—ನಾನ್ ಕೋೀ ೀ ಳೀಕೆ ರಂಗಾ !

‘ಕೋ’ನು—‘ಳೀ’ನು—‘ಕೆ’ನು—‘ರ’ನು—ಸೊನ್ನೆ—‘ಗಾ’ ! !

ಪಂಡಿತ—ವಾರೆ ಮೇರಾ ಷೇರ್ ! ಅದು ಗಂಡಸ್ತನ !

ರಂಗ—ಅಂಗಂತಾನೇವೇಯೆ....ಅದ್ಕೇನೆ....

ದನಗಳ್ನೂ ಮಕ್ಕಳ್ನೂ ಎಂಡರ್ನೂವೆ

ಅಟ್ಟಿ ಅವ್ವೇನೂ ಬುಟ್ಟು

ಬಂದಿವ್ನಿ ನಾ....ನಿಮ್ ಮುಂದ್ ನಿಂತಿವ್ನಿ ನಾ

ನಮ್ಮಳ್ಳಿ ಕಿಲಾಡಿ ವುಂಜಾ ! ! !

‘ಹುತ್ತ’ದ ಹಿರಿಯಣ್ಣಯ್ಯ—ಓಹೋ ! ಇವನು ‘ಕಿಲಾಡಿ ಹುಂಜ !’ ಹಾಗಾದರೆ....
ನಾನ್ ಯಾರೋ....ಇವನ ಅಪ್ಪ ?

ಮಗು—ನೀವ್ ಇರ್ಲೀರೀ....ಇವನು ‘ ಕಿಲಾಡಿ ವುಂಜ ’ ಆದ್ರೆ........ನಂ ಜಂಬದ ಕೋಳಿ ರಾಘು ಗತಿ ಏನ್ರೀ ?

ಯಜಮಾನ್ರು—ನೀವೆಲ್ಲಾ ಇರ್ಲಯ್ಯ.. ಇವನು ‘ ಕಿಲಾಡಿ ವುಂಜ ’ ಆಗ್ಬಿಟ್ರೆ.... ನಮ್ಮ cock's townಇನ hen-pecked husbandಉ.... ನನ್ friendಉ.. ... gutless ಸುಬ್ಬು........though God knows I love him. ಅವನ ಗತೀ ಏನು ಅಂತ ?

ಜೀವು—ನೀವ್ ಕೆಡೋದೆಲ್ಲ ನಿಮ್ ಇಂಗ್ಲಿಷ್ ಬೆರಸಿದ ಕನ್ನಡ. ನಿಮ್ಮ ಬಂಡ ವಾಳವಿಲ್ಲದ ಬಡಾಯಿ !....

ಶೂರ್ಪನಖಾ ಕಿಟ್ಟಿ—ತ್ಥುತ್ ! ಪರದೇ ಬಿಡೋ ! ನಾಟ್ಕ ಹಾಳಾ ಎ ಎ ಗ್ಹೋಯ್ತು !

[‘ ಪೋಃಪೆಯಾ ಭೂಪಾ ’ ಮಂಗಳದೊಡನೆ ಪರದೆ]

—‘ ಗುಂಡೂ ಪಂಡಿತ ’

ಚಂಡಪ್ರಚಂಡ 'ಗುಂಡೂ'!!

ಗುಂಡೂ! ಗುಂಡೂಊ;! ಗುಂಡೂಊಊ!!!

ಕಂಠೀರವ ನರಸರಾಜ ನಾಮಾಂಕಿತ ಪಾರಿತೋಷಕ ವಿಜಯೀ!

ಕರ್ಣಾಟಕ ಪ್ರಹಸನ ಪ್ರಪಿತಾಮಹ!

ಪಂಡಿತ ಮಂಡಲಾಗ್ರೇಸರ! ಚಂಡ ಪ್ರಚಂಡ ಗುಂಡೂ!

ಗುಂಡೂರಾಯ ನಮೋಸ್ತು ತೇ!

"ವಜ್ರಾದಪಿ ಕಠೋರಾಣಿ ಮೃದೂನಿ ಕುಸುಮಾದಪಿ" ಎಂಬ ಮಾತನ್ನು ಪಕ್ವವಾದ ಚೈತನ್ಯಗಳ ಸಂಬಂಧದಲ್ಲಿ ಆಡುತ್ತಾರೆ. ಇಂಥ ಚೈತನ್ಯಗಳು ವಜ್ರಕ್ಕಿಂತ ಕಠೋರವಾಗಿರುತ್ತವೆ, ಕುಸುಮಗಳಿಗಿಂತ ಮೃದುವಾಗಿರುತ್ತವೆ ಎಂದು ಹೇಳುತ್ತಾರೆ. ನೆನ್ನೆ ೨೯-೭-೪೪ಕ್ಕೆ ಅರುವತ್ತು ವರುಷವಾದ **ಶ್ರೀ ಟಿ. ಪಿ. ಕೈಲಾಸಂ** ಅವರ ಚೈತನ್ಯ ಇಂಥದು. ಇವರ ಕೃತಿಗಳಲ್ಲೆಲ್ಲ ವಜ್ರದ ಕಠೋರತೆಯೂ ಕುಸುಮದ ಮಾರ್ದವವೂ—ಒಮ್ಮೆ ಒಂದು ಒಳಗೆ, ಒಮ್ಮೆ ಒಂದು ಹೊರಗೆ ರಾಮ—ಕೃಷ್ಣರುಗಳಂತೆ ಮೈತಾಳಿ ಬಂದಿವೆ. ಈ ಕೃತಿಗಳನ್ನು ರಾಮ, ಕೃಷ್ಣ ಎಂದು ಹೋಲಿಸ್ಸುವುದಕ್ಕೆ ಕಾರಣವಿದೆ. ಕೈಲಾಸಂ ಹೇಳುವ ಹಾಗೆ "ರಾಮ: ಹೊರಗೆ ಪುರುಷ, ಒಳಗೆ ಪ್ರಕೃತಿ!"—"ಕೃಷ್ಣ: ಹೊರಗೆ ಪ್ರಕೃತಿ, ಒಳಗೆ ಪುರುಷ!" ಕೈಲಾಸಂ ಅವರ ಕನ್ನಡ ಕೃತಿಗಳು ಕೃಷ್ಣನ ಹಾಗೆ, ಇಂಗ್ಲಿಷ್ ಕೃತಿಗಳು ರಾಮನ ಹಾಗೆ.

ಈ ವಜ್ರ—ಕುಸುಮಗಳ, ಈ ರಾಮ—ಕೃಷ್ಣರ ಸಮನ್ವಯವನ್ನು ಹೊಂದಿ, "ಆಟಗಾರ ಕೈಲಾಸಂ, ಶಾಸ್ತ್ರಜ್ಞ ಕೈಲಾಸಂ, ವಿನೋದಗಾರ ಕೈಲಾಸಂ, ಹಾಸ್ಯಗಾರ ಕೈಲಾಸಂ, ವರಕವಿ ಕೈಲಾಸಂ, ನಾಟಕ ಕರ್ತೃ ಕೈಲಾಸಂ, ಸೂಕ್ಷ್ಮನೀತಿಜ್ಞ ಕೈಲಾಸಂ, ಶಿಕ್ಷಕ ಕೈಲಾಸಂ, ಗಾಯಕ ಕೈಲಾಸಂ, ವ್ಯಾಯಾಮ ಸಾಧಕ ಕೈಲಾಸಂ—ಕೊನೆಗೆ ಶತವಕ್ರ ಕೈಲಾಸಂ" ಮುಂತಾಗಿ ಎಷ್ಟೋ ಮುಖಗಳುಳ್ಳ ವ್ಯಕ್ತಿಯ ಚೈತನ್ಯವೆಂತು, ಮನಸ್ಸೆಂತು, ವರ್ತನೆಯೆಂತು ಎಂಬುದನ್ನು ತಿಳಿಯಬೇಕಾದರೆ ಶ್ರೀ ಕಂದಾಡೆ ಕೃಷ್ಣಯ್ಯಂಗಾರ್ಯರ "**ನಾನು ಕಂಡ ಕೈಲಾಸಂ**" ಎಂಬ ಪುಸ್ತಕವನ್ನು ಓದಬೇಕು. (ಪುಸ್ತಕದ ಬೆಲೆ ಒಂದೂಕಾಲು ರೂಪಾಯಿ.)

ಇದರ ಜೊತೆಗೆ, 'ಕರ್ಣಾಟಕ ಪ್ರಹಸನ ಪ್ರಪಿತಾಮಹ' ಎನಿಸಿದ ಕೈಲಾಸಂ ಅವರ ಕೃತಿಗಳ ಹಾಸ್ಯದ ಹೊದಿಕೆಯನ್ನು ಮಾತ್ರವಲ್ಲದೆ ಆ ಹೊದಿಕೆಯಲ್ಲಿ ಅಡಗಿರುವ "ವಿಷಾದ ಮುಖ, ವಿಚಾರ ಮುಖ, ಗಂಭೀರ ಮುಖ" ಮುಂತಾದ ಹಲವಾರು ಮುಖಗಳನ್ನು ಕಾಣಬಯಸಿದರೆ ಶ್ರೀ ಜಿ. ಪಿ. ರಾಜರತ್ನಂ ಅವರ "ಕೈಲಾಸ ಕಥನ ಅಥವಾ ಗುಂಡೂ ಭಂಡಾರ ಮಥನ" ಎಂಬ ಪುಸ್ತಕವನ್ನು ನೋಡಬೇಕು. (ಬೆಲೆ ಒಂದು ರೂಪಾಯಿ.)

ಈ ಎರಡು ಪುಸ್ತಕಗಳನ್ನೂ ಬೆಂಗಳೂರು ಅರಳೇಪೇಟೆಯ ಬಿ. ಬಿ. ಡಿ. ಪವರ್ ಪ್ರೆಸ್ಸಿನವರು ಪುಸ್ತಕಗಳ ಘನತೆಗೆ ತಕ್ಕಂತೆ ಲಕ್ಷಣವಾಗಿ ಮುದ್ರಿಸಿದ್ದಾರೆ.

Printed by B. S. Iyengar, Bangalore City

Publisher—B N. Gupta. Editor—M. Shivaram.